# ಅಧ್ಯಾಯ 11

# ಇತರ ಇಲಾಖೆಗಳು

ಆಡಳಿತ ಯಂತ್ರದ ಕಾರ್ಯ ಚಟುವಟಿಕೆಗಳು, ನೀತಿ ನಿರ್ಣಯಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಇಲಾಖೆಗಳ ಹಾಗೂ ವಿವಿಧ ನಿಗಮಗಳು, ಮಂಡಳಿಗಳು ಮುಂತಾದವುಗಳ ಮೂಲಕ ಕಾರ್ಯರೂಪಕ್ಕೆ ಬರುತ್ತವೆ. ಈ ಸಂಪುಟದ ಇತರ ಕೆಲವು ಅಧ್ಯಾಯಗಳಲ್ಲಿ ವಿವಿಧ ಇಲಾಖೆಗಳು, ನಿಗಮಗಳು ಜಿಲ್ಲೆಯಲ್ಲಿ ಕೈಗೊಂಡಿರುವ ವಿವಿಧ ಕಾರ್ಯಗಳ ಹಾಗೂ ಅಭಿವೃದ್ಧಿ ಯೋಜನೆಗಳ ಬಗ್ಗೆ ವಿಚಾರ ಮಾಡಲಾಗಿದೆ. ಪ್ರಜಾಪ್ರಭುತ್ವ ಸರ್ಕಾರದಲ್ಲಿ ಕಾಲಕಾಲಕ್ಕೆ ಸಮಾಜದ ಅವಶ್ಯಕತೆಗಳು ಮತ್ತು ಪ್ರಗತಿಗಾಗಿ ಆಡಳಿತ ಕ್ರಮವನ್ನು ಮಾರ್ಪಡಿಸುವುದು ಮತ್ತು ವಿಸ್ತರಿಸುವುದು, ಅನಿವಾರ್ಯವಾಗಿರುತ್ತದೆ. ಜಿಲ್ಲಾಧಿಕಾರಿಯ ವ್ಯಾಪ್ತಿಗೆ ಹೊರತಾಗಿ ಜಿಲ್ಲೆಯಲ್ಲಿರುವ ಇತರ ಇಲಾಖೆಗಳು, ಸರಕಾರೀ ಮಂಡಳಿ ಮತ್ತು ನಿಗಮಗಳು ಜಿಲ್ಲಾ ಮಟ್ಟದಲ್ಲಿ ಹೊಂದಿರುವ ಕಚೇರಿಗಳ ಹುಟ್ಟು, ಬೆಳವಣಿಗೆ, ಮಾರ್ಪಾಡು ಹಾಗೂ ಕಾರ್ಯಾಚರಣೆಯ ಇತರ ರೂಪರೇಷೆಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡುವುದು ಈ ಅಧ್ಯಾಯದ ಮೂಲೋದ್ದೇಶವಾಗಿದೆ.

### ಅಂಗನವಾಡಿ ತರಬೇತಿ ಕೇಂದ್ರ

ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕರಿಗೆ ತರಬೇತಿ ನೀಡುವ ಉದ್ದೇಶದಿಂದ ಮಡಿಕೇರಿಯಲ್ಲಿ 1982ರಲ್ಲಿ ಅಂಗನವಾಡಿ ತರಬೇತಿ ಕೇಂದ್ರವು ಆರಂಭವಾಯಿತು. ಮುಖ್ಯ ಬೋಧಕರು ಈ ಕೇಂದ್ರದ ಮುಖ್ಯಸ್ಥರಾಗಿದ್ದು ಇವರ ನೆರವಿಗಾಗಿ ಇಬ್ಬರು ಬೋಧಕರೂ ಮತ್ತು ಇತರ ನಾಲ್ಕು ಸಿಬ್ಬಂದಿ ವರ್ಗದವರೂ ಇರುತ್ತಾರೆ.

### ಅಬಕಾರಿ ಇಲಾಖೆ

ಜಿಲ್ಲೆಯಲ್ಲಿ ಅಬಕಾರಿ (ಎಕ್ಸೈಜ್) ಇಲಾಖೆಯ ಹಲವಾರು ಅಧಿನಿಯಮಗಳನ್ನು ಜಾರಿಗೊಳಿಸಲು ಮಡಿಕೇರಿಯಲ್ಲಿ ಅಬಕಾರಿ ಅಧೀಕ್ಷಕರ ಕಚೇರಿ ಇದೆ. ಈ ಕಚೇರಿಯು 1968ಕ್ಕೆ ಮುಂಚೆ ಪಾನ ನಿಷೇಧಕ ಅಬಕಾರಿ ನಿರೀಕ್ಷಕರ ಕಚೇರಿಯಾಗಿದ್ದು 1968ರಲ್ಲಿ ಸಹಾಯಕ ಅಬಕಾರಿ ಅಧೀಕ್ಷಕರ ಕಚೇರಿಯಾಗಿ ಬದಲಾವಣೆಯಾಗಿ ಪುನಃ 1970ರಲ್ಲಿ ಅಬಕಾರಿ ಅಧೀಕ್ಷಕರಕಚೇರಿಯಾಗಿ ಪರಿವರ್ತನೆ ಆಯಿತು. ಜಿಲ್ಲೆಯ ಕಂದಾಯ ಉಪ ಆಯುಕ್ತರು ಪದನಿಮಿತ್ತ ಅಬಕಾರಿ ಉಪ ಆಯುಕ್ತರಾಗಿರುತ್ತಾರೆ. ಅಬಕಾರಿ ಅಧೀಕ್ಷಕರ ನೆರವಿಗಾಗಿ ಒಬ್ಬ ಅಬಕಾರಿ ಉಪ ಅಧೀಕ್ಷರಿದ್ದಾರೆ. ಅಲ್ಲದೇ ಒಬ್ಬ ಕಚೇರಿ ಅಧೀಕ್ಷಕರೂ ಮತ್ತು ಇತರ ಸಿಬ್ಬಂದಿಯೂ ಇದ್ದಾರೆ. ಈ ಕಚೇರಿಯ ಅಧೀನದಲ್ಲಿ ಮಡಿಕೇರಿ, ಸೋಮವಾರಪೇಟೆ ಮತ್ತು ಕುಶಾಲನಗರದ ಉಪ ವಲಯಗಳನ್ನೊಳಗೊಂಡಿರುವ ಮಡಿಕೇರಿಯಲ್ಲಿನ ವಲಯ ಕಚೇರಿಯೂ ಹಾಗೂ ವೀರರಾಜಪೇಟೆ, ಪೊನ್ನಂಪೇಟೆ ಮತ್ತು ನಾಪೋಕ್ಲುಗಳಲ್ಲಿನ ಉಪ ವಲಯಗಳನ್ನೊಳಗೊಂಡಿರುವ ವೀರರಾಜಪೇಟೆಯಲ್ಲಿನ ವಲಯ ಕಚೇರಿಯೂ; ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆಯಲ್ಲಿರುವ ಶುಲ್ಕಬದ್ಧ ಸಾರಾಯಿ ಡಿಪೋಗಳೂ; ಮಡಿಕೇರಿಯಲ್ಲಿನ ಸಾರಾಯಿ ಬಾಟ್ಲಿಂಗ್ ಉಗ್ರಾಣ ಹಾಗೂ ಕುಶಾಲನಗರದಲ್ಲಿ ಶುಲ್ಕಬದ್ಧ ಸಾರಾಯಿ ಉಗ್ರಾಣವೂ ಕಾರ್ಯನಿರ್ವಹಿಸುತ್ತಿದ್ದು ಒಟ್ಟಾರೆ ಇಬ್ಬರು

ಅಬಕಾರಿ ನಿರೀಕ್ಷಕರೂ ಮತ್ತು ಆರುಜನ ಉಪ ನಿರೀಕ್ಷಕರೂ ಸೇರಿಕೊಂಡಂತೆ ಜಿಲ್ಲೆಯಲ್ಲಿ ಒಟ್ಟು 45 ವಿವಿಧ ಹುದ್ದೆಗಳಿವೆ.

1987ರಿಂದ ಮಡಿಕೇರಿಯಲ್ಲಿ ಮಡಿಕೇರಿ ಉಪವಿಭಾಗದ ಸಂಚಾರೀದಳದ ಅಬಕಾರಿ ಉಪ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿದ್ದು ಇವರ ಅಧೀನದಲ್ಲಿ ಮಡಿಕೇರಿ, ಸೋಮ ವಾರಪೇಟೆ ಮತ್ತು ವೀರರಾಜಪೇಟೆಗಳಲ್ಲಿ ಸಂಚಾರೀದಳ ಗಳಿದ್ದು ಪ್ರತೀ ಸಂಚಾರೀದಳದಲ್ಲಿ ಒಬ್ಬ ಅಬಕಾರಿ ಉಪನಿರೀ ಕ್ಷಕರೂ ಹಾಗೂ ಇತರಸಿಬ್ಬಂದಿ ಇದ್ದಾರೆ. ಮಂಗಳೂರಿನಲ್ಲಿರುವ ಮಂಗಳೂರು ವಿಭಾಗದ ಜಾರಿ ಮತ್ತು ತನಿಖೆಯ ಅಬಕಾರಿ ಉಪ ಆಯುಕ್ತರು ಇವರ ತಕ್ಷಣದ ಮೇಲಾಧಿಕಾರಿಗಳಾಗಿರು ತ್ತಾರೆ. ಬೆಂಗಳೂರಿನಲ್ಲಿರುವ ಅಬಕಾರಿ ಆಯುಕ್ತರು ಇಲಾಖೆಯ ಮುಖ್ಯಾಧಿಕಾರಿಯಾಗಿರುತ್ತಾರೆ.

### ಅರಣ್ಯ ಇಲಾಖೆ

ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿದ್ದಾಗಲೇ ಅರಣ್ಯ ಇಲಾಖೆಯನ್ನು ಹೊಂದಿದ್ದು ಇದು 1863ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಅದಕ್ಕೆ ಹಿಂದೆ ರೈತರಿಗೆ ನೀಡಲಾದ ಸವಲತ್ತುಗಳ ವಿನಾ ಉಳಿದ ಅರಣ್ಯ ಉತ್ಪತ್ತಿಗಳನ್ನು ಸಂಗ್ರಹಿಸಿ ತಂದ ಜನರಿಂದ ಅರಮನೆಯೇ ಖರೀದಿಸಿ ಮಾರುವ ಏರ್ಪಾಡಿತ್ತು. ಬೇರೆಯವರಿಗೆ ಅವನ್ನು ಪ್ರಜೆಗಳು ಮಾರುವಂತೆ ಇರಲಿಲ್ಲ. ಅರಣ್ಯ ಸಂರಕ್ಷಣೆ ಮತ್ತು ಅರಣ್ಯ ಅಭಿವೃದ್ಧಿ ಚಟುವಟಿಕೆ ಗಳು ಹಾಗೂ ಸರ್ಕಾರದ ಪರವಾಗಿ ಮರ, ಸೌದೆ, ಶ್ರೀಗಂಧ ಮುಂತಾದ ಅರಣ್ಯ ಉತ್ಪತ್ತಿಗಳ ಮಾರಾಟ ಮತ್ತು ಆದಾಯ ವಸೂಲಿ ಇವೇ ಮೊದಲಾದ ಪ್ರಮುಖ ಕಾರ್ಯ ಚಟುವಟಿಕೆ ಗಳನ್ನು ನಿರ್ವಹಿಸಲು ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯು ಮಡಿಕೇರಿಯಲ್ಲಿದೆ. ಇವರ ಅಧಿಕಾರ ವ್ಯಾಪ್ತಿಯು ಮಡಿಕೇರಿ ತಾಲೂಕು, ಸೋಮವಾರ ಪೇಟೆ ತಾಲೂಕು ಹಾಗೂ ವೀರರಾಜಪೇಟೆ ತಾಲೂಕಿನಲ್ಲಿ ತಿತಿಮತಿ, ಭದ್ರಗೊಳ, ಚನ್ನನಕೋಟೆ, ಮೇಕೂರು, ಹೊಸ ಕೇರಿ, ಚನ್ನಂಗಿ, ಬಾಡಗ–ಬಾಣಂಗಾಲ, ಕೊಡಗು ಶ್ರೀರಂಗ ಪಟ್ಟಣ, ಮಾಲ್ದಾರೆ, ನೋಕ್ಯ-ಸಿದ್ದಾಪುರ, ಹೆಬ್ಬಾಲೆ, ಬಾಳಲೆ, ದೇವನೂರು, ನಿಟ್ಟೂರು, ಕಾನೂರು, ಕೋತೂರು ಮತ್ತು ಕೆ. ಬಾಡಗ ಗ್ರಾಮಗಳ ವ್ಯಾಪ್ತಿಯನ್ನು ಹೊರತು ಪಡಿಸಿ ಉಳಿದ ಗ್ರಾಮಗಳನ್ನೊಳಗೊಂಡಿದೆ. ಇಲ್ಲಿ ಹೆಸರಿಸಿರುವ ಗ್ರಾಮಗಳು ಹುಣಸೂರು ಅರಣ್ಯ ವಿಭಾಗಕ್ಕೆ ಸೇರಿರುತ್ತವೆ. ಮಡಿಕೇರಿ ಪ್ರಾದೇಶಿಕ ವಿಭಾಗಕ್ಕೆ ಮಂಗಳೂರು, ಮೈಸೂರಿನ ಕೆ.ಆರ್. ನಗರ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕುಗಳೂ ಒಳಗೊಂಡಿವೆ. ಈ ಕಚೇರಿಯಲ್ಲಿ ಉಪಅರಣ್ಯ ಸಂರಕ್ಷಣಾಧಿಕಾರಿಯವರ ನೆರವಿಗಾಗಿ ಒಬ್ಬ ಅಧೀಕ್ಷಕರು, ನಾಲ್ಕು ಪ್ರಥಮ ದರ್ಜೆ ಸಹಾಯಕರು, ಒಂಬತ್ತು ದ್ವಿತೀಯ ದರ್ಜೆ ಸಹಾಯಕರು, ಒಬ್ಬ ಬೆರಳಚ್ಚುಗಾರರು ಹಾಗೂ ಇತರ ಸಿಬ್ಬಂದಿ ವರ್ಗದವರಿರುತ್ತಾರೆ. ಈ ಕಚೇರಿಯ ಅಧೀನದಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಉಪವಿಭಾಗ ಕಚೇರಿಗಳೂ, ಮಡಿಕೇರಿಯಲ್ಲಿನ ಅರಣ್ಯ ಸಂಚಾರಿದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ ಮತ್ತು ಹದಿನಾಲ್ಕು ಅರಣ್ಯ ವಲಯಾಧಿಕಾರಿಗಳ ಕಚೇರಿಗಳೂ ಇವೆ. ಮಡಿಕೇರಿಯಲ್ಲಿರುವ ಕೊಡಗು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

### ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

ಕೊಡಗು ಜಿಲ್ಲೆಯಲ್ಲಿ ಆಹಾರ ಮತ್ತು ಇತರ ಅತ್ಯವಶ್ಯಕ ಪದಾರ್ಥಗಳ ವಿತರಣಾ ಕಾರ್ಯವನ್ನು ಮಡಿಕೇರಿಯಲ್ಲಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರ ಕಚೇರಿ ನಿರ್ವಹಿಸುತ್ತಿದೆ. ಈ ಕಚೇರಿಯು ಅಕ್ಟೋಬರ್ 1984ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಮೊದಲು ಜಿಲ್ಲಾಧಿಕಾರಿಯಲ್ಲಿನ ಆಹಾರ ಸಹಾಯಕರು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಉಪ ನಿರ್ದೇಶಕರ ನೆರವಿಗಾಗಿ ಕಚೇರಿಯಲ್ಲಿ ಒಬ್ಬ ಲೇಖಾಧೀಕ್ಷಕರು, ಒಬ್ಬ ನಾಗರಿಕ ಸರಬರಾಜು ವೀಕ್ಷಕರು, ಒಬ್ಬ ಜಿಲ್ಲಾ ಆಹಾರ ಪರಿವೀಕ್ಷಕರು, ಒಬ್ಬ ಕಚೇರಿ ವ್ಯವಸ್ಥಾಪಕರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಅಲ್ಲದೆ ಒಬ್ಬ ಶಿರಸ್ತೇದಾರರು ಒಬ್ಬ ಪ್ರಥಮ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗದವರನ್ನು ಜಿಲ್ಲಾ ಪರಿಷತ್ತಿಗೆ ನಿಯೋಜಿಸಲಾಗಿದೆ. ಜಿಲ್ಲೆಯ ಮೂರು ತಾಲೂಕುಗಳ ತಹಶೀಲ್ದಾರರ ಕಚೇರಿ ಯಲ್ಲಿ ಈ ಇಲಾಖೆಯ ಪ್ರಥಮ ದರ್ಜೆ ಸಹಾಯಕರು ಕಾರ್ಯ ನಿರ್ವಹಿಸುತ್ತಿರುವರು. ಜಿಲ್ಲಾ ಪರಿಷತ್ತಿನ ಅಧೀನ ದಲ್ಲಿರುವ ಇಲಾಖೆಯ ಸಿಬ್ಬಂದಿಗಳಾದ ಮೂವರು ಶಿರಸ್ತೇ ದಾರರು, ಮೂವರು ಪ್ರಥಮ ದರ್ಜೆ ಸಹಾಯಕರು ಹಾಗೂ ಮೂವರು ದ್ವಿತೀಯ ದರ್ಜೆ ಸಹಾಯಕರು ಕಾರ್ಯ ನಿರ್ವಹಿ ಸುತ್ತಿರುವರು. ಬೆಂಗಳೂರಿನಲ್ಲಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ.

### ಆರೋಗ್ಯ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಪ್ರತ್ಯೇಕ ಆರೋಗ್ಯ ಇಲಾಖೆಯು 1936ರಲ್ಲಿ ಕೊಡಗಿನ ಸಿವಿಲ್ ಸರ್ಜನ್ ಅವರ ಮೇಲ್ವಿ

ಚಾರಣೆಯಲ್ಲಿ ಆರಂಭವಾಯಿತು. 1949ರಲ್ಲಿ ಸಾರ್ವಜನಿಕ ಆರೋಗ್ಯ ಇಲಾಖೆಯನ್ನು ವೈದ್ಯಕೀಯ ಇಲಾಖೆಯಿಂದ ಬೇರ್ಪಡಿಸಿ ಮಲೇರಿಯಾ ಅಧಿಕಾರಿಗಳ ವ್ಯಾಪ್ತಿಗೆ ಒಳಪಡಿಸಲಾಯಿತು. 1960ರಲ್ಲಿ ಸಹಾಯಕ ಜಿಲ್ಲಾ ಆರೋಗ್ಯ ಅಧಿಕಾರಿಗಳು ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವುದರ ಜೊತೆಗೆ ಕೆಲವು ದೊಡ್ಡ ವೈದ್ಯಕೀಯ ಸಂಸ್ಥೆಗಳನ್ನು ಹೊರಪಡಿಸಿ ಉಳಿದ ವೈದ್ಯಕೀಯ ಸಂಸ್ಥೆಗಳ ಜವಾಬ್ದಾರಿಯನ್ನು ಅವರ ವ್ಯಾಪ್ತಿಗೆ ತರಲಾಯಿತು. 1967ರಲ್ಲಿ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆಗಳು ಒಂದಾದುದರ ಪರಿಣಾಮವಾಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳು ಜಿಲ್ಲೆಯ ಆರೋಗ್ಯ ಸೇವೆಗಳ ಮುಖ್ಯಾಧಿಕಾರಿಗಳಾದರು. ನಂತರದ ವರ್ಷಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಎರಡು ಸ್ವತಂತ್ರ ಕಾರ್ಯ ವಿಭಾಗಗಳಾಗಿ ಒಂದು ವಿಭಾಗವು ಜಿಲ್ಲಾ ಆಸ್ಪತ್ರೆ ಜವಾಬ್ದಾರಿಯಿರುವ ಜಿಲ್ಲಾ ಸರ್ಜನ್ ಮತ್ತೊಂದು ವಿಭಾಗಕ್ಕೆ ಜಿಲ್ಲಾ ಆರೋಗ್ಯಾಧಿಕಾರಿಗಳು ಮುಖ್ಯಸ್ಥರಾದರು. ಜಿಲ್ಲಾ ಆರೋಗ್ಯಾಧಿಕಾರಿಗಳ ಹುದ್ದೆಯು ನಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಯೋಜನಾಧಿಕಾರಿಗಳೆಂದು ಬದಲಾಗಿ 1978ರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೆಂದು ಪುನಃ ಬದಲಾವಣೆ ಮಾಡಲಾಯಿತು. ಇವರ ಕಚೇರಿಯಲ್ಲಿ ಏಪ್ರಿಲ್ 1990ರಲ್ಲಿ ಒಬ್ಬ ಪತ್ರಾಂಕಿತ ಸಹಾಯಕರು, ಒಬ್ಬ ಆರೋಗ್ಯ ಮೇಲ್ವಿಚಾರಕರು, ಇಬ್ಬರು ಜಿಲ್ಲಾ ದಾದಿಯರ ಮೇಲ್ವಿಚಾರಕರು, ಒಬ್ಬ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು, ಮೂವರು ಉಪ ಆರೋಗ್ಯ ಶಿಕ್ಷಣಾಧಿಕಾರಿಗಳು, ಒಬ್ಬ ಸಹಾಯಕ ಮಲೇರಿಯಾ ಅಧಿಕಾರಿಗಳು, ಐವರು ಅಧೀಕ್ಷಕರ ಹಾಗೂ ಇತರ ಹುದ್ದೆಗಳಿದ್ದುವು.

### ಉದ್ಯೋಗ ಮತ್ತು ತರಬೇತಿ ಇಲಾಖೆ

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯು ಮಡಿಕೇರಿಯಲ್ಲಿ 1940ರಲ್ಲಿ ಪ್ರಾರಂಭವಾಯಿತು. ಜಿಲ್ಲಾ ಉದ್ಯೋಗ ವಿನಿಮಯಾಧಿಕಾರಿಯವರು ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಉದ್ಯೋಗ ಬಯಸುವ ಅಭ್ಯರ್ಥಿಗಳ ಹೆಸರನ್ನು ನೋಂದಾಯಿಸುವುದು ಮತ್ತು ನಿಯೋಜಕರಿಂದ ಅಧಿಸೂಚಿಸಲ್ಪಡುವಂತಹ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಪುರಸ್ಕರಿಸುವುದು ಹಾಗೂ ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳಲ್ಲಿರುವ ಉದ್ಯೋಗಸ್ತರ ತ್ರೈಮಾಸಿಕ ವರದಿಯನ್ನು ಸಂಗ್ರಹಿಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದು ಈ ಕಚೇರಿಯ ಮುಖ್ಯ ಕರ್ತವ್ಯವಾಗಿರುತ್ತದೆ. ಇದರ ಅಧಿಕಾರ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿರುತ್ತದೆ. ಅಧಿಕಾರಿಗಳ ನೆರವಿಗಾಗಿ ಈ ಕಚೇರಿಯಲ್ಲಿ ಒಬ್ಬರು ಉದ್ಯೋಗಾಧಿಕಾರಿ (ವೃತ್ತಿಮಾರ್ಗದರ್ಶನ), ಒಬ್ಬರು ಸಹಾಯಕ ಉದ್ಯೋಗಾಧಿಕಾರಿ, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಮೂವರು ದ್ವಿತೀಯ ದರ್ಜೆ ಸಹಾಯಕರು, ಒಬ್ಬರು ಬೆರಳಚ್ಚುಗಾರರು ಮತ್ತು ನಾಲ್ಕು 'ಡಿ' ವೃಂದದ ನೌಕರರೂ ಕಾರ್ಯನಿರ್ವಹಿಸುತ್ತಿರುವರು. ಬೆಂಗಳೂರಿನಲ್ಲಿರುವ ಉದ್ಯೋಗ ಮತ್ತು ತರಬೇತಿ ಇಲಾಖೆಯ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ.

### ಎನ್.ಸಿ.ಸಿ.

ಕೊಡಗು ಜಿಲ್ಲೆಯಲ್ಲಿ 19ನೇ ಕರ್ನಾಟಕ ನ್ಯಾಷನಲ್ ಕ್ಯಾಡೆಟ್‌ಕೋರ್ ಬೆಟಾಲಿಯನ್ ಕಚೇರಿಯನ್ನು ಮಡಿಕೇರಿಯಲ್ಲಿ 1954ರಲ್ಲಿ ಪ್ರಾರಂಭಿಸಲಾಯಿತು. ಆರಂಭದಲ್ಲಿ ಇದು ಕಂಪನಿ ಎನ್.ಸಿ.ಸಿ. ಆಗಿದ್ದು 1963ರಲ್ಲಿ ಎನ್.ಸಿ.ಸಿ. ಬೆಟಾಲಿಯನ್ ಆಗಿ ಪರಿವರ್ತನೆಯಾಯಿತು. ಇದರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕುಗಳನ್ನೊಳಗೊಂಡಿದೆ. ಲೆಫ್ಟಿನೆಂಟ್ ಕರ್ನಲ್ ಸ್ಥಾನದಲ್ಲಿರುವ ಕಮಾಂಡಿಂಗ್ ಆಫೀಸರ್ ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ಸಹಾಯಕ್ಕಾಗಿ ಕಚೇರಿಯಲ್ಲಿ ಮೇಜರ್ ಸ್ಥಾನದಲ್ಲಿರುವ ಒಬ್ಬ ಆಡಳಿತಾಧಿಕಾರಿಗಳು, ಒಬ್ಬ ಜೂನಿಯರ್ ಕಮಿಷನ್ಡ್ ಆಫೀಸರ್ ಮತ್ತು ಆರು ಜನ ಹವಲ್ದಾರ್ ಸ್ಥಾನದಲ್ಲಿರುವ ನಾನ್‌ಕಮಿಷನ್ಡ್ ಆಫೀಸರ್ ಇರುತ್ತಾರೆ. ಅಲ್ಲದೆ ಒಬ್ಬ ಅಧೀಕ್ಷಕ ಹಾಗೂ ಇತರ ಕಚೇರಿ ಸಿಬ್ಬಂದಿ ಹುದ್ದೆಗಳಿವೆ. ಕಾಲೇಜು ಮತ್ತು ಶಾಲಾ ವಿದ್ಯಾರ್ಥಿಗಳನ್ನು ಎನ್.ಸಿ.ಸಿ. ತರಬೇತಿಗೆ ಆಯ್ಕೆ ಮಾಡಿಕೊಂಡು ಕ್ರಮಬದ್ಧವಾಗಿ ಸೈನಿಕ ತರಬೇತಿಯನ್ನು ನೀಡುವುದು, ವಿದ್ಯಾರ್ಥಿಗಳಲ್ಲಿ ನಾಯಕತ್ವದ ಲಕ್ಷಣವನ್ನು ವೃದ್ಧಿಸುವುದು ಹಾಗೂ ಸಾಹಸ ಮತ್ತು ಸೇವಾ ಮನೋಭಾವಗಳನ್ನು ಬೆಳೆಸುವುದು ಇದರ ಮುಖ್ಯ ಕರ್ತವ್ಯವಾಗಿದ್ದು ಶಾಲಾ ಮತ್ತು ಕಾಲೇಜುಗಳಲ್ಲಿರುವ ಅರೆಕಾಲಿಕ ಎನ್.ಸಿ.ಸಿ. ಅಧಿಕಾರಿಗಳ ಸಹಾಯದಿಂದ ಈ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. ಈ ಕಚೇರಿಯು ಮಂಗಳೂರಿನಲ್ಲಿರುವ ಗ್ರೂಪ್ ಕಮಾಂಡರ್‌ರ ಅಧೀನದಲ್ಲಿದೆ.

### ಔಷಧ ನಿಯಂತ್ರಣ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಔಷಧ ನಿಯಂತ್ರಣ ಇಲಾಖೆಯ ಕಾರ್ಯಾಚರಣೆಯನ್ನು ನಡೆಸಲು ಔಷಧ ಪರಿವೀಕ್ಷಕರ ಕಚೇರಿಯು 1980ರಲ್ಲಿ ಮಡಿಕೇರಿಯಲ್ಲಿ ಆರಂಭವಾಯಿತು. ಇದಕ್ಕೆ ಮೊದಲು ಇದು ಮೈಸೂರಿನಲ್ಲಿರುವ ಔಷಧ ನಿಯಂತ್ರಣ

ಇಲಾಖೆಯ ವಿಭಾಗೀಯ ಕಚೇರಿಯ ವ್ಯಾಪ್ತಿಗೆ ಒಳಪಟ್ಟಿತ್ತು. ಔಷಧ ಮಾರಾಟ ಮಾಡುವ ಅಂಗಡಿಗಳಿಗೆ ಪರವಾನಗಿಯನ್ನು ನೀಡುವ ಸಲುವಾಗಿ ತಪಾಸಣೆ ನಡೆಸಿ ಶಿಫಾರಸ್ಸು ಮಾಡುವುದು ಮತ್ತು ಸಾರ್ವಜನಿಕರಿಂದ ಬರುವ ದೂರನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳುವುದೂ ಈ ಕಚೇರಿಯ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಕಚೇರಿಯಲ್ಲಿ ಒಬ್ಬ ಔಷದ ಪರಿವೀಕ್ಷಕರೂ ಇತರ ಸಿಬ್ಬಂದಿಗಳೂ ಇದ್ದಾರೆ.

### ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯು ಮಡಿಕೇರಿಯಲ್ಲಿ 1980ರಲ್ಲಿ ಪ್ರಾರಂಭವಾಯಿತು. ಜಿಲ್ಲೆಯಲ್ಲಿನ ಕಚೇರಿಗಳಲ್ಲಿ ಕನ್ನಡ ಭಾಷೆಯ ಬಳಕೆಯ ಬಗೆಗೆ ಮೇಲ್ವಿಚಾರಣೆ ನಡೆಸುವುದು, ಕನ್ನಡಿಗರಲ್ಲದ ನೌಕರರಿಗೆ ವಿಶೇಷ ಕನ್ನಡ ಕಲಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು, ಜಿಲ್ಲೆಯಲ್ಲಿರುವ ಕಲಾವಿದರನ್ನು ಗುರುತಿಸುವುದು, ಸಾಂಸ್ಕೃತಿಕ ಚಟುವಟಿಕೆಗಳನ್ನು ಮತ್ತು ವಿಚಾರಸಂಕಿರಣಗಳನ್ನು ಜಿಲ್ಲಾ ಮಟ್ಟದಲ್ಲಿ ನಡೆಸುವುದು ಈ ಕಚೇರಿಯ ಪ್ರಮುಖ ಕಾರ್ಯವಾಗಿರುತ್ತದೆ. ಸಹಾಯಕ ನಿರ್ದೇಶಕರ ಸಹಾಯಕ್ಕಾಗಿ ಕಚೇರಿಯಲ್ಲಿ ಒಂದು ಗುಮಾಸ್ತ ಹಾಗೂ ಬೆರಳಚ್ಚುಗಾರನ ಹುದ್ದೆಯೂ ಮತ್ತು ಒಂದು 'ಡಿ' ವೃಂದದ ನೌಕರನ ಹುದ್ದೆಯೂ ಇದೆ. ಮೈಸೂರಿನಲ್ಲಿರುವ ಮೈಸೂರು ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ಕಾರ್ಮಿಕ ಇಲಾಖೆ

ಕೊಡಗಿನಲ್ಲಿ ವಿವಿಧ ಕಾರ್ಮಿಕ ಕಾಯಿದೆಗಳನ್ನು ಜಾರಿಗೆ ತರಲು ಹಾಗೂ ಕೈಗಾರಿಕಾ ಶಾಂತಿ ಮತ್ತು ಸಮಾಧಾನವನ್ನು ಸಂರಕ್ಷಿಸಲು ಒಬ್ಬ ಕಾರ್ಮಿಕ ಅಧಿಕಾರಿಗಳು ಇರುವರು. ಇವರ ಕಚೇರಿಯು ಮಡಿಕೇರಿಯಲ್ಲಿ 1954ರಲ್ಲಿ ಪ್ರಾರಂಭವಾಯಿತು. ಇವರ ಅಧೀನತೆಯಲ್ಲಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರು ಕಾರ್ಯ ನಿರ್ವಹಿಸುತ್ತಿರುವರು. ಕಚೇರಿಯ ಕಾರ್ಯ ನಿರ್ವಹಣೆಯಲ್ಲಿ ಅಧಿಕಾರಿಗಳಿಗೆ ನೆರವಾಗಲು ಒಬ್ಬ ಹಿರಿಯ ಕಾರ್ಮಿಕ ನಿರೀಕ್ಷಕರೂ ಇತರ ಸಿಬ್ಬಂದಿಯೂ ಇದ್ದಾರೆ. ಚಿಕ್ಕಮಗಳೂರಿನಲ್ಲಿರುವ ಸಹಾಯಕ ಕಾರ್ಮಿಕ ಆಯುಕ್ತರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ. (ವಿವರಗಳಿಗೆ ಅಧ್ಯಾಯ 16 ನೋಡಿ).

### ಕೃಷಿ ಇಲಾಖೆ

ಕೊಡಗು ಜಿಲ್ಲೆಯಲ್ಲಿ 1956ರ ನವೆಂಬರ್ ತಿಂಗಳಲ್ಲಿ ರಾಜ್ಯ ಪುನರ್ವಿಂಗಡನೆಯ ನಂತರ ಕೃಷಿ ಇಲಾಖೆಯು ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಇದರ ಜಿಲ್ಲಾ ಮಟ್ಟದ ಕಚೇರಿಯು ಮಡಿಕೇರಿಯಲ್ಲಿದ್ದು ಆರಂಭದಲ್ಲಿ ಜಿಲ್ಲಾ ಕೃಷಿ ಅಧಿಕಾರಿಗಳೂ ನಂತರ ಉಪ ಕೃಷಿನಿರ್ದೇಶಕರೂ ಇದರ ಅಧಿಕಾರಿಗಳಾಗಿದ್ದು, ಈಗ ಪ್ರಧಾನ ಕೃಷಿಅಧಿಕಾರಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯಲ್ಲಿ ಕೃಷಿ ವಿಸ್ತರಣಾ ಯೋಜನೆಯನ್ನು ಹಾಗೂ ಇಲಾಖೆಯ ಇತರ ಎಲ್ಲಾ ಯೋಜನೆಗಳನ್ನು ಜಾರಿಗೆ ತರುವುದು ಮತ್ತು ಅವರ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುವುದು ಇವರ ಮುಖ್ಯ ಜವಾಬ್ದಾರಿಯಾಗಿರುತ್ತದೆ. ಇವರ ಸಹಾಯಕ್ಕಾಗಿ ಒಬ್ಬ ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರ ಸ್ಥಾನ), ಒಬ್ಬ ಆಡಳಿತ ಸಹಾಯಕರು ಮತ್ತು ಐದು ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು) ಇರುತ್ತಾರೆ. ಕಚೇರಿಯ ಕಾರ್ಯನಿರ್ವಹಣೆಗಾಗಿ ಒಬ್ಬ ವ್ಯವಸ್ಥಾಪಕರು, ಒಬ್ಬ ಅಧೀಕ್ಷಕರು ಹಾಗೂ ಇತರ ಸಿಬ್ಬಂದಿ ವರ್ಗದವರಿದ್ದಾರೆ. ಈ ಕಚೇರಿಯ ಅಧೀನದಲ್ಲಿ ತಾಲೂಕು ಮಟ್ಟದ ಕೃಷಿ ಯೋಜನಾ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮೂರು ತಾಲೂಕುಗಳಲ್ಲಿ ಒಬ್ಬ ಸಹಾಯಕ ಕೃಷಿ ನಿರ್ದೇಶಕರೂ ಹಾಗೂ ಕೃಷಿ ಅಧಿಕಾರಿ, ಮಣ್ಣು ಆರೋಗ್ಯಕೇಂದ್ರ, ಕೂಡಿಗೆ ಮತ್ತು ಕೃಷಿ ಅಧಿಕಾರಿ, ಕೃಷಿ ಪಾಠಶಾಲೆ, ಕೂಡಿಗೆ ಇವರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಇಲಾಖೆಯ ಜಂಟಿ ನಿರ್ದೇಶಕರು, ಮೈಸೂರು ವಿಭಾಗ, ಮೈಸೂರು ಇವರು ಈ ಕಚೇರಿಯ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

1963ಕ್ಕೆ ಮೊದಲು ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಡಳಿತವನ್ನು ನಿರ್ವಹಿಸಲು ಒಬ್ಬ ಸಹಾಯಕ ನಿರ್ದೇಶಕರಿದ್ದರು. 1963ರಲ್ಲಿ ಕೊಡಗು ಜಿಲ್ಲೆಗೆ ಸೀಮಿತವಾಗಿ ಮಡಿಕೇರಿಯಲ್ಲಿ ಒಂದು ಪ್ರತ್ಯೇಕ ಸಹಾಯಕ ನಿರ್ದೇಶಕರ ಕಚೇರಿಯು ಪ್ರಾರಂಭವಾಯಿತು. 1982ರಲ್ಲಿ ಇದು ಪ್ರಧಾನವ್ಯವಸ್ಥಾಪಕರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ ಎಂದು ಬದಲಾವಣೆಯಾಯಿತು. ಜಿಲ್ಲೆಯ ಆರ್ಥಿಕ ಅಂಶಗಳನ್ನು ಗಮನಿಸಿ ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ಯೋಜನೆಗಳನ್ನು ರೂಪಿಸುವುದು ಮತ್ತು ಜಿಲ್ಲೆಯಲ್ಲಿರುವ ಗ್ರಾಮೀಣ ಕರಕುಶಲ ತರಬೇತಿ ಕೇಂದ್ರಗಳ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು ಈ

ಕಚೇರಿಯ ಪ್ರಧಾನ ಕಾರ್ಯವಾಗಿರುತ್ತದೆ. ಪ್ರಧಾನ ವ್ಯವಸ್ಥಾಪಕರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು ಇವರ ನೆರವಿಗಾಗಿ ನಾಲ್ವರು ಕಾರ್ಯನಿರ್ವಾಹಕ ವ್ಯವಸ್ಥಾಪಕರು, ಒಬ್ಬ ಸಹಾಯಕ ನಿರ್ದೇಶಕರು, ಒಬ್ಬ ಕೈಗಾರಿಕಾ ಉತ್ತೇಜನಾಧಿಕಾರಿಗಳು, ಒಬ್ಬ ಅಧೀಕ್ಷಕರು ಹಾಗೂ ಇತರ ಸಿಬ್ಬಂದಿ ವರ್ಗದವರಿರುತ್ತಾರೆ. ಈ ಕಚೇರಿಯ ಅಧೀನದಲ್ಲಿ ಮಡಿಕೇರಿಯಲ್ಲಿರುವ ಸಹಾಯಕ ನಿರ್ದೇಶಕರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ ಉಪ ವಿಭಾಗವು ಕಾರ್ಯ ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿರುವ ಕೈಗಾರಿಕಾ ಅಭಿವೃದಿಯ ಆಯುಕ್ತರು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಗೃಹರಕ್ಷಕ ದಳ

ಗೃಹರಕ್ಷಕ ದಳದ ಕಮಾಂಡಂಟ್ ಅವರ ಕಚೇರಿಯು ಮಡಿಕೇರಿಯಲ್ಲಿ 1963ರಲ್ಲಿ ಆರಂಭವಾಯಿತು. ಇವರ ಸಹಾಯಕ್ಕಾಗಿ ಒಬ್ಬ ತರಬೇತಿದಾರ ಇಬ್ಬರು ಸಹಾಯಕ ತರಬೇತಿದಾರರು, ಒಬ್ಬ ಪ್ರಥಮ ದರ್ಜೆ ಸಹಾಯಕ, ಒಬ್ಬ ದ್ವಿತೀಯ ದರ್ಜೆ ಸಹಾಯಕ, ಒಬ್ಬ ದಳಾಯತ ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಗೃಹರಕ್ಷಕ ದಳವು ಪೋಲೀಸರಿಗೆ ಸಹಾಯಕ ದಳವಾಗಿ ಕಾರ್ಯ ನಿರ್ವಹಿಸುವುದೇ ಅಲ್ಲದೆ ಅಗ್ನಿ ಅನಾಹುತ, ಭೂಕಂಪ, ಪ್ರವಾಹ, ಮುಷ್ಕರ ಇವೇ ಮುಂತಾದ ಸಂದರ್ಭಗಳಲ್ಲಿ ಸಂಬಂಧಪಟ್ಟ ರಕ್ಷಣಾದಳಕ್ಕೆ ನೆರವಾಗಿ ಕಾರ್ಯ ನಿರ್ವಹಿಸುತ್ತದೆ. ಜಿಲ್ಲೆಯ ಹತ್ತು ಸ್ಥಳಗಳಲ್ಲಿ ಅಂದರೆ ಮಡಿಕೇರಿ, ಸೋಮವಾರಪೇಟೆ, ಶಾಂತಳ್ಳಿ, ಶನಿವಾರಸಂತೆ, ವೀರರಾಜಪೇಟೆ, ಸಿದ್ದಾಪುರ, ಕುಶಾಲನಗರ, ಪೊನ್ನಂಪೇಟೆ, ಭಾಗಮಂಡಲ ಮತ್ತು ಮೂರ್ನಾಡುಗಳಲ್ಲಿ ಗೃಹರಕ್ಷಕ ದಳದ ಘಟಕಗಳಿವೆ. ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯದ ಮಹಾನಿರ್ದೇಶಕರು ಮತ್ತು ಕಮಾಂಡೆಂಟ್ ಜನರಲ್, ಗೃಹರಕ್ಷಕ ದಳ ಇವರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಕಾರಾಗೃಹ

ಜಿಲ್ಲಾ ಕಾರಾಗೃಹ ಅಧೀಕ್ಷಕರ ಕಚೇರಿಯು 1871ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಮೊದಲಿಗೆ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳು (ಸರ್ಜನ್) ಕಾರಾಗೃಹದ ಪದನಿಮಿತ್ತ ಅಧೀಕ್ಷಕರಾಗಿದ್ದರು. 1978 ರಿಂದೀಚೆಗೆ ಕರ್ನಾಟಕ ಕಾರಾಗೃಹಗಳ ಇಲಾಖೆಯ ಅಧೀಕ್ಷಕರುಗಳನ್ನು ಜಿಲ್ಲಾ ಕಾರಾಗೃಹಗಳ ಅಧೀಕ್ಷಕರಾಗಿ ನೇಮಿಸಲಾಗುತ್ತಿದೆ. ಇವರ ಅಧಿಕಾರ ವ್ಯಾಪ್ತಿಯು ಮೊದಲು ಈ ಕಚೇರಿಗೆ ಮಾತ್ರ ಸೀಮಿತವಾಗಿತ್ತು. 1987 ರಿಂದೀಚೆಗೆ ವೀರರಾಜಪೇಟೆಯಲ್ಲಿರುವ ಉಪ ಕಾರಾಗೃಹದ ಉಸ್ತುವಾರಿಯನ್ನು ಇವರಿಗೆ ಒಪ್ಪಿಸಿದೆ. ಅಧೀಕ್ಷಕರ ನೆರವಿಗಾಗಿ ಕಚೇರಿಯಲ್ಲಿ ಒಬ್ಬ ದ್ವಿತೀಯ ದರ್ಜೆ ಸಹಾಯಕ, ಮೂವರು ಹೆಡ್ ವಾರ್ಡರ್, 10 ವಾರ್ಡರ್ ಹಾಗೂ ಇಬ್ಬರು ಮಹಿಳಾ ವಾರ್ಡರ್ ಇರುತ್ತಾರೆ. ಬೆಂಗಳೂರಿನಲ್ಲಿರುವ ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಕೇಂದ್ರ ಗ್ರಂಥಾಲಯ

ಜಿಲ್ಲಾ ಕೇಂದ್ರ ಗ್ರಂಥಾಲಯವು 1956ರಲ್ಲಿ ಮಹಾತ್ಮಾ ಗಾಂಧಿ ಗ್ರಂಥಾಲಯ ಎಂಬ ಹೆಸರಿನಲ್ಲಿ ಪ್ರಾರಂಭವಾಯಿತು. ಆರಂಭದಲ್ಲಿ ಇದು ರಾಜ್ಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು. 1971ರಲ್ಲಿ ಇದನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಗೊಳಪಡಿಸಿ ಜಿಲ್ಲಾ ಕೇಂದ್ರ ಗ್ರಂಥಾಲಯ ಎಂದು ಕರೆಯಲಾಗಿದೆ. ಮುಖ್ಯ ಗ್ರಂಥಾಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯಲ್ಲಿ ಶಾಖಾ ಗ್ರಂಥಾಲಯಗಳನ್ನು ಮತ್ತು ಮಂಡಲ ಕೇಂದ್ರ ಗ್ರಂಥಾಲಯಗಳನ್ನು ಪ್ರಾರಂಭಿಸುವುದು ಹಾಗೂ ಅವರ ಮೇಲ್ವಿಚಾರಣೆ ವಹಿಸುವುದೂ ಇವರ ಮುಖ್ಯ ಕರ್ತವ್ಯವಾಗಿರುತ್ತದೆ. 1987 ರಿಂದ ಜಿಲ್ಲೆಯಲ್ಲಿ ಸಂಚಾರೀ ಗ್ರಂಥಾಲಯ ಸೇವೆಯನ್ನು ಪ್ರಾರಂಭಿಸಲಾಗಿದೆ. ಮುಖ್ಯ ಗ್ರಂಥಾಧಿಕಾರಿಗಳ ನೆರವಿಗಾಗಿ ಗ್ರಂಥಾಲಯದಲ್ಲಿ ಒಬ್ಬರು ಗ್ರಂಥಪಾಲಕರು, ಒಬ್ಬರು ಸಹಗ್ರಂಥಪಾಲಕರು, ಆರು ಜನ ಗ್ರಂಥಾಲಯ ಸಹಾಯಕರು ಒಬ್ಬರು ದ್ವಿತೀಯ ದರ್ಜೆ ಸಹಾಯಕರೂ, ಇತರ ಸಿಬ್ಬಂದಿ ಇರುತ್ತಾರೆ. ಇವರ ಅಧೀನದಲ್ಲಿ ಆರು ಶಾಖಾ ಗ್ರಂಥಾಲಯಗಳೂ, ಹನ್ನೆರಡು ಮಂಡಲ ಕೇಂದ್ರ ಗ್ರಂಥಾಲಯಗಳೂ ಮತ್ತು ಒಂದು ಸಂಚಾರೀ ಗ್ರಂಥಾಲಯವೂ ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿರುವ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ. (ಅಧ್ಯಾಯ 13 ನೋಡಿ).

## ಜಿಲ್ಲಾ ಖಜಾನಾಧಿಕಾರಿ

ಜಿಲ್ಲಾ ಖಜಾನಾಧಿಕಾರಿಯವರ ಕಚೇರಿಯು ಮಡಿಕೇರಿಯಲ್ಲಿ 1-6-1961 ರಿಂದ ಕಾರ್ಯ ನಿರ್ವಹಿಸುತ್ತಿದೆ. ಖಜಾನೆ ಇಲಾಖೆಯು 1964ರಲ್ಲಿ ಆರಂಭವಾಗುವುದಕ್ಕೆ ಮುಂಚೆ ಈ ಕಚೇರಿಯ ಆಡಳಿತವು ಜಿಲ್ಲಾಧಿಕಾರಿಗಳ ಆಡಳಿತಕ್ಕೊಳಪಟ್ಟಿತ್ತು. ಇದರ ಅಧಿಕಾರ ವ್ಯಾಪ್ತಿಯು

ಜಿಲ್ಲೆಗೆ ಸೀಮಿತವಾಗಿದೆ. ಜಿಲ್ಲೆಯಲ್ಲಿ ಹಣ ಸಂದಾಯ ಮಾಡುವ ಅಧಿಕಾರಿಗಳು ಸಲ್ಲಿಸುವ ದೇಯಕಗಳ ಪರಿಶೀಲನೆ, ಪಾವತಿ ಮತ್ತು ಇಲಾಖಾವಾರು ವೆಚ್ಚ ಮತ್ತು ಜಮೆಗಳ ಕ್ರೋಢೀಕರಣ, ರಕ್ಷಣಾ ಇಲಾಖೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಿಂಚಣಿಯನ್ನು ಪಾವತಿ ಮಾಡುವುದು, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಮತ್ತು ವಿಧವಾ ವೇತನವನ್ನು ಪಾವತಿ ಮಾಡುವುದು ಹಾಗೂ ಸರ್ಕಾರಿ ಛಾಪಾ ಕಾಗದಗಳ ಸ್ವೀಕೃತಿ ಮತ್ತು ವಿತರಣೆ ಇವೇ ಮುಂತಾದವು ಜಿಲ್ಲಾ ಖಜಾನೆಯ ಪ್ರಮುಖ ಕಾರ್ಯವಾಗಿರುತ್ತದೆ. ಜಿಲ್ಲಾ ಖಜಾನಾಧಿಕಾರಿಯವರ ನೆರವಿಗಾಗಿ ಒಬ್ಬ ಸಹಾಯಕ ಖಜಾನಾಧಿಕಾರಿ, ನಾಲ್ವರು ಮುಖ್ಯ ಕರಣಿಕರು, ಏಳು ಪ್ರಥಮ ದರ್ಜೆ ಸಹಾಯಕರು, ಹದಿನೈದು ದ್ವಿತೀಯ ದರ್ಜೆ ಸಹಾಯಕರು, ಒಬ್ಬರು ಬೆರಳಚ್ಚುಗಾರರು, ಒಬ್ಬರು ದಫೇದಾರ ಹಾಗೂ ಇಬ್ಬರು 'ಡಿ' ವೃಂದದ ನೌಕರರೂ ಇರುತ್ತಾರೆ. ಈ ಕಚೇರಿಯ ಅಧೀನದಲ್ಲಿ ಕುಶಾಲನಗರ, ಸೋಮವಾರಪೇಟೆ, ವೀರರಾಜಪೇಟೆ, ಪೊನ್ನಂಪೇಟೆ ಮತ್ತು ನಾಪೋಕ್ಲುವಿನಲ್ಲಿ ಉಪಖಜಾನೆಗಳು ಕಾರ್ಯ ನಿರ್ವಹಿಸುತ್ತಿದ್ದು ವಿವಿಧ ಹುದ್ದೆಗಳಲ್ಲಿ ಒಟ್ಟು 27 ಜನರು ಕಾರ್ಯ ನಿರ್ವಹಿಸುತ್ತಿರುವರು. ಬೆಂಗಳೂರಿನಲ್ಲಿರುವ ಖಜಾನೆಗಳ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ.

### ಜಿಲ್ಲಾ ಸಾಂಖ್ಯಿಕ ಕಚೇರಿ

ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣ (ಸಾಂಖ್ಯಿಕ) ಕಚೇರಿಯು ಮಡಿಕೇರಿಯಲ್ಲಿ 1965ರಲ್ಲಿ ಪ್ರಾರಂಭವಾಯಿತು. ಜಿಲ್ಲೆಯ ವಿವಿಧ ಇಲಾಖಾ ಕಚೇರಿಗಳಿಂದ ಸಂಬಂಧಿಸಿದ ಅಂಕಿಅಂಶಗಳ ಮಾಹಿತಿಯನ್ನು ಸಂಗ್ರಹಿಸುವುದು ಇವರ ಮುಖ್ಯ ಕಾರ್ಯವಾಗಿರುತ್ತದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರು ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ಸಹಾಯಕ್ಕಾಗಿ ಇಬ್ಬರು ಸಹಾಯಕ ಸಂಖ್ಯಾಧಿಕಾರಿಗಳೂ, ಇಬ್ಬರು ಸಂಖ್ಯಾ ಪರಿವೀಕ್ಷಕರು, ಒಬ್ಬ ಅಧೀಕ್ಷಕರು ಮತ್ತಿತರ ಕಚೇರಿ ಸಿಬ್ಬಂದಿ ವರ್ಗದವರಿರುತ್ತಾರೆ. ಇವರ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಸಂಖ್ಯಾ ಪರಿವೀಕ್ಷಕರು ಮತ್ತು ಗಣತಿದಾರರು ಹಾಗೂ ತಾಲೂಕು ಪಂಚಾಯಿತಿ ಸಮಿತಿ ಕಚೇರಿಗಳಲ್ಲಿ ಪ್ರಗತಿ ಸಹಾಯಕರು ಕಾರ್ಯ ನಿರ್ವಹಿಸುತ್ತಿರುವರು. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಇವರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ.

### ಜೇನು ಕೃಷಿ ಅಭಿವೃದ್ಧಿ ಅಧಿಕಾರಿ

ಜೇನು ಕೃಷಿ ಅಭಿವೃದ್ಧಿ ಅಧಿಕಾರಿಗಳ ಕಚೇರಿ, ಕರ್ನಾಟಕ ಪಶ್ಚಿಮವಲಯ, ಇದು ಮಡಿಕೇರಿಯಲ್ಲಿ 1962ರಲ್ಲಿ ಪ್ರಾರಂಭವಾಯಿತು. ಇವರ ಅಧಿಕಾರ ವ್ಯಾಪ್ತಿಗೆ ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳು ಒಳಪಟ್ಟಿವೆ. ಈ ಕಚೇರಿಯು ಈಗ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು 1962ಕ್ಕೆ ಮುಂಚೆ ಇದು ವ್ಯವಸಾಯ ಇಲಾಖೆಯಲ್ಲಿ ವಿಲೀನವಾಗಿತ್ತು. ಈ ಕಚೇರಿಯು ಕಾರ್ಯನಿರ್ವಹಣೆಗೆ ತಾಂತ್ರಿಕ ಸಿಬ್ಬಂದಿಗಳೂ ಮತ್ತು ಆಡಳಿತ ಸಿಬ್ಬಂದಿಗಳೂ ಇದ್ದು 1.4.1987 ರಿಂದ ತಾಂತ್ರಿಕ ಸಿಬ್ಬಂದಿಗಳು ಜಿಲ್ಲಾ ಪರಿಷತ್ತಿಗೆ ವರ್ಗಾವಣೆಯಾಗಿರುತ್ತಾರೆ. ತಾಂತ್ರಿಕ ಮೇಲ್ವಿಚಾರಣೆಯು ಈ ಕಚೇರಿಗೆ ಒಳಪಟ್ಟಿರುತ್ತದೆ. ಭಾಗಮಂಡಲ, ವೀರರಾಜಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಜೇನುಕೃಷಿ ಸಂಘಟಕರ ಕಚೇರಿಗಳಿವೆ.

### ಕಾನೂನು ಮಾಪನ ಶಾಸ್ತ್ರ ಇಲಾಖೆ

ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಚೇರಿಯು ಮಡಿಕೇರಿಯಲ್ಲಿ 1962ರಲ್ಲಿ ಪ್ರಾರಂಭವಾಯಿತು ಆರಂಭದಲ್ಲಿ ಈ ಕಚೇರಿಯು ಮುಖ್ಯಾಧಿಕಾರಿಯ ಹುದ್ದೆಯ ಹೆಸರು ಸಹಾಯಕ ನಿಯಂತ್ರಕರು, ತೂಕ ಮತ್ತು ಅಳತೆ ಇಲಾಖೆ ಎಂದಿದ್ದು 1989ರಲ್ಲಿ ಕಾನೂನುಮಾಪನಶಾಸ್ತ್ರ ಸಹಾಯಕ ನಿಯಂತ್ರಕರು ಹಾಗೂ ಗ್ರಾಹಕರ ಹಿತರಕ್ಷಣೆ ಸಹಾಯಕ ನಿರ್ದೇಶಕರು ಎಂದು ಬದಲಾವಣೆಯಾಗಿದ್ದು 1990ರಲ್ಲಿ ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರು ಎಂದು ಮತ್ತೆ ಪರಿವರ್ತನೆಯಾಯಿತು. ಆರಂಭದಲ್ಲಿ ಇವರ ಅಧಿಕಾರ ವ್ಯಾಪ್ತಿಗೆ ಕೊಡಗು ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಒಳಪಟ್ಟಿದ್ದು 1989-90ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಮಾತ್ರ ಸೀಮಿತವಾಯಿತು. ತೂಕ ಮತ್ತು ಅಳತೆ ಸಾಧನೆಗಳಿಗೆ ವಾರ್ಷಿಕವಾಗಿ ಸತ್ಯಾಪನೆ ಮಾಡುವುದು ಮತ್ತು ಮುದ್ರೆ ಹಾಕುವುದು, ಆಗಾಗ್ಗೆ ತಪಾಸಣೆ ಮಾಡಿ ತೂಕ ಮತ್ತು ಅಳತೆಗಳಲ್ಲಿ ಮೋಸ ಮಾಡುವವರ ಮೇಲೆ ಕಾನೂನಿಗನುಗುಣವಾಗಿ ಮೊಕದ್ದಮೆಗಳನ್ನು ಹೂಡುವುದು ಮತ್ತು ಕೇಂದ್ರ ಸರ್ಕಾರದ 1977ರ ಪೊಟ್ಟಣ ಸಾಮಗ್ರಿ ನಿಯಮಗಳನ್ನು ಜಾರಿಗೆ ತರುವುದು ಈ ಕಚೇರಿಯ ಮುಖ್ಯ ಉದ್ದೇಶಗಳಾಗಿವೆ. ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ನೆರವಿಗೆ ಸೂಕ್ತ ಸಿಬ್ಬಂದಿ ಇದೆ. ಈ ಕಚೇರಿಯು

ಅಧೀನದಲ್ಲಿ ಮಡಿಕೇರಿ ಉಪವಿಭಾಗದ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರ ಕಚೇರಿಯು ಮಡಿಕೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮೈಸೂರಿನಲ್ಲಿರುವ ಕಾನೂನು ಮಾಪನ ಶಾಸ್ತ್ರ ಉಪನಿಯಂತ್ರಕರು ಈ ಕಚೇರಿಯ ತಕ್ಷಣದ ಮೇಲಧಿ ಕಾರಿಗಳಾಗಿರುತ್ತಾರೆ.

### ತೋಟಗಾರಿಕೆ ಇಲಾಖೆ

ಜಿಲ್ಲಾ ತೋಟಗಾರಿಕೆ ಅಧಿಕಾರಿಗಳ ಕಚೇರಿಯು 1969 ರಿಂದ ಮಡಿಕೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿದೆ. ಇದಕ್ಕೆ ಹಿಂದೆ ಅಂದರೆ 1957ರಲ್ಲಿ ಏಲಕ್ಕಿ ಅಭಿವೃದ್ಧಿ ಅಧಿಕಾರಿಗಳ ಕಚೇರಿಯೆಂದು ಕರೆಯಲಾಗಿದ್ದು ಇದರ ಅಧಿಕಾರ ವ್ಯಾಪ್ತಿಯು ಕೊಡಗು, ಹಾಸನ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡಿತ್ತು. 1963ರಲ್ಲಿ ಈ ಕಚೇರಿಯನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಎಂದು ಪರಿವರ್ತಿಸಲಾಯಿತು. ತೋಟದ ಬೇಸಾಯಗಾರರಿಗೆ ಸೂಕ್ತವಾದ ಬೆಳೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು ಹಾಗೂ ತಾಂತ್ರಿಕ ತಿಳುವಳಿಕೆಯನ್ನು ನೀಡಿ ತೋಟದ ಬೆಳೆಗಳನ್ನು ವೃದ್ಧಿಸುವುದು ಇವರ ಮುಖ್ಯ ಕಾರ್ಯವಾಗಿರುತ್ತದೆ. ಕಚೇರಿಯಲ್ಲಿ ಅಧಿಕಾರಿಗಳ ನೆರವಿಗಾಗಿ ಒಬ್ಬ ಕೇಂದ್ರಸ್ಥಾನ ಸಹಾಯಕರು, ಒಬ್ಬ ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬ ಅಧೀಕ್ಷಕರು, ಒಬ್ಬ ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಒಬ್ಬ ಪ್ರಥಮ ದರ್ಜೆ ಸಹಾಯಕರು, ಇಬ್ಬರು ತೋಟಗಾರಿಕೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಮತ್ತಿತರರು ಇರುತ್ತಾರೆ. ಈ ಕಚೇರಿಯ ಅಧೀನದಲ್ಲಿ ಸೋಮವಾರಪೇಟೆ ಮತ್ತು ಪೊನ್ನಂಪೇಟೆಯಲ್ಲಿರುವ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಕಚೇರಿಯೂ ಮತ್ತು ನಾಪೋಕ್ಲು ಮತ್ತು ಕೂಡಿಗೆಯಲ್ಲಿರುವ ತೋಟಗಾರಿಕೆ ಕ್ಷೇತ್ರಗಳೂ ಕಾರ್ಯ ನಿರ್ವಹಿಸುತ್ತಿದೆ. ಮೈಸೂರಿನಲ್ಲಿರುವ ತೋಟಗಾರಿಕೆ ಉಪ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ. ಈ ಇಲಾಖೆಯ ಅಧೀನದಲ್ಲಿಜಿಲ್ಲೆಯಲ್ಲಿ ಕೆಲವು ಫಾರ್ಮ್‌ಗಳು ಇವೆ. (ವಿವರಗಳಿಗೆ ಪು. 275 ನೋಡಿ.)

### ನಗರ ಯೋಜನೆ

ಕರ್ನಾಟಕ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಅಧಿನಿಯಮ—1961ನ್ನು ಜಾರಿಗೊಳಿಸುವ ಸಲುವಾಗಿ ಜಿಲ್ಲಾ ಯೋಜನಾಘಟಕವು 1975ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಇದರ ಮುಖ್ಯಾಧಿಕಾರಿಗಳು ನಗರ ಯೋಜನಾ ಸಹಾಯಕ ನಿರ್ದೇಶಕರಾಗಿದ್ದು ಇವರ ಕಾರ್ಯನಿರ್ವಹಣೆಯ ಸಹಾಯಕ್ಕಾಗಿ ಇಬ್ಬರು ಕಿರಿಯ ನಗರ ಯೋಜಕರು, ಐದು ಜನ ನಗರ ಯೋಜನಾ ಪರಿವೀಕ್ಷಕರು, ಒಬ್ಬರು ಆಕೃತಿ ರಚಕರು(ಡ್ರಾಫ್ಟ್ಸ್‌ಮನ್) ಒಬ್ಬರುಅನುರೇಖಕರು(ಟ್ರೇಸರ್) ಹಾಗೂ ಇತರ ಸಿಬ್ಬಂದಿ ಇದ್ದಾರೆ. ಬೆಂಗಳೂರಿನಲ್ಲಿರುವ ನಗರ ಯೋಜನಾ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

### ಪಶುಸಂಗೋಪನೆ

ಕೊಡಗು ಜಿಲ್ಲೆಯಲ್ಲಿ ಮುಖ್ಯ ಪಶುವೈದ್ಯಾಧಿಕಾರಿಗಳ ಕಚೇರಿಯು 1956ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. 1986ರಲ್ಲಿ ಇದನ್ನು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರ ಕಚೇರಿಯನ್ನಾಗಿ ಪರಿವರ್ತಿಸಲಾಯಿತು. ಸಾಕು ಪ್ರಾಣಿಗಳ ಆರೋಗ್ಯ ಸುರಕ್ಷಣೆಯು ಇವರ ಪ್ರಧಾನ ಕಾರ್ಯವಾಗಿದ್ದು ಇವರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿರುತ್ತದೆ. ಉಪ ನಿರ್ದೇಶಕರ ಕಚೇರಿಯಲ್ಲಿ ಒಬ್ಬ ಸಹಾಯಕ ಯೋಜನಾಧಿಕಾರಿ, ಒಬ್ಬ ಅಧೀಕ್ಷಕರು, ಮೂವರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಮೂವರು ಬೆರಳಚ್ಚುಗಾರರು ಮತ್ತು ಇತರ ಸಿಬ್ಬಂದಿ ವರ್ಗವಿರುವ ಒಟ್ಟು 26 ಹುದ್ದೆಗಳಿವೆ. ಇವರ ಅಧೀನವಾಗಿ ಕಾರ್ಯ ನಿರ್ವಹಿಸುತ್ತಿರುವ ಕಚೇರಿಗಳೆಂದರೆ : ಮಡಿಕೇರಿ ತಾಲೂಕಿನಲ್ಲಿ ಮಡಿಕೇರಿಯ ಪಶುವೈದ್ಯ ಆಸ್ಪತ್ರೆ ಮತ್ತು ಸಂಚಾರಿ ಪಶು ಚಿಕಿತ್ಸಾಲಯ, ನಾಪೋಕ್ಲು ಮತ್ತು ಭಾಗಮಂಡಲದಲ್ಲಿರುವ ಪಶುವೈದ್ಯ ಶಾಲೆಗಳು ಹಾಗೂ ಏಳು ಗ್ರಾಮೀಣ ಪಶುವೈದ್ಯ ಶಾಲೆಗಳು, ಸೋಮವಾರಪೇಟೆ ತಾಲೂಕಿನಲ್ಲಿ ಕೂಡಿಗೆಯಲ್ಲಿರುವ ಪ್ರಾದೇಶಿಕ ಕೋಳಿ ಸಾಕಣೆ ಕೇಂದ್ರ, ಸೋಮವಾರಪೇಟೆ ಕುಶಾಲನಗರ, ಹೆಬ್ಬಾಲೆ, ಸುಂಟಿಕೊಪ್ಪ, ಶನಿವಾರಸಂತೆ ಮತ್ತು ಕೊಡ್ಲಿಪೇಟೆಯಲ್ಲಿರುವ ಪಶುವೈದ್ಯ ಶಾಲೆಗಳು, 3 ಗ್ರಾಮೀಣ ಪಶುವೈದ್ಯ ಶಾಲೆಗಳು, ಸೋಮವಾರಪೇಟೆಯಲ್ಲಿನ ಸಂಚಾರಿ ಪಶು ಚಿಕಿತ್ಸಾಲಯ ಹಾಗೂ ಪ್ರಧಾನ ಗ್ರಾಮೀಣ ಯೋಜನೆ ಮತ್ತು ಅದರ ವ್ಯಾಪ್ತಿಯಲ್ಲಿರುವ 6 ಪ್ರಧಾನ ಗ್ರಾಮೀಣ ಯೋಜನಾ ಉಪಕೇಂದ್ರಗಳು ಮತ್ತು ಹುದುಗೂರಿನಲ್ಲಿರುವ ಗೋಸದನಕೇಂದ್ರ, ವೀರರಾಜಪೇಟೆ ತಾಲೂಕಿನಲ್ಲಿ ದೇವನೂಜಿಯಲ್ಲಿರುವ ಗೋಸದನಕೇಂದ್ರ, ವೀರರಾಜಪೇಟೆ, ಪೊನ್ನಂಪೇಟೆ, ಅಮ್ಮತ್ತಿ, ಪೊಲ್ಲಿಬೆಟ್ಟ, ಸಿದ್ದಾಪುರ ಮತ್ತು ತಿತಿಮತಿಯಲ್ಲಿರುವ ಪಶುವೈದ್ಯ ಶಾಲೆಗಳು, 8 ಗ್ರಾಮೀಣ ಪಶುವೈದ್ಯ ಶಾಲೆಗಳು, ಸಂಚಾರಿ ಪಶು ಚಿಕಿತ್ಸಾಲಯ (ವೀರರಾಜಪೇಟೆ), ಪ್ರಧಾನ ಗ್ರಾಮೀಣ

ಯೋಜನೆ ಗೋಣಿಕೊಪ್ಪಲು ಮತ್ತು ಅದರ ವ್ಯಾಪ್ತಿಯಲ್ಲಿರುವ 6 ಉಪಕೇಂದ್ರಗಳು ಹಾಗೂ ಪ್ರಧಾನ ಗ್ರಾಮೀಣ ಯೋಜನೆ, ಅಮ್ಮತ್ತಿ ಮತ್ತು ಅದರ ವ್ಯಾಪ್ತಿಯಲ್ಲಿರುವ 6 ಉಪಕೇಂದ್ರಗಳು ಇದ್ದು ಒಟ್ಟಾರೆ ಉಪ ನಿರ್ದೇಶಕರ ಅಧೀನತೆಯಲ್ಲಿ 10 ಪಶುವೈದ್ಯಾಧಿಕಾರಿಗಳು, 14 ಪಶುವೈದ್ಯರೂ, 5 ಮೇಲ್ವಿಚಾರಕರು, 14 ಮೊದಲನೇಯ ದರ್ಜೆ ಪಶು ಪರೀಕ್ಷಕರು, 38 ಎರಡನೇಯ ದರ್ಜೆ ಪಶುಪರೀಕ್ಷಕರು, 36 ಔಷಧ ಮಿಶ್ರಣಕಾರರೂ, ಇತರ ಸಿಬ್ಬಂದಿಯೂ ಸೇರಿ ಒಟ್ಟು 196 ಹುದ್ದೆಗಳಿವೆ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳೂ ಮತ್ತು ಸರ್ಕಾರದ ವ್ಯಾಪ್ತಿಯಲ್ಲಿ ಬೆಂಗಳೂರಿನಲ್ಲಿರುವ ಪಶುಪಾಲನಾ ಇಲಾಖೆಯ ನಿರ್ದೇಶಕರೂ ಇವರ ಮೇಲಧಿಕಾರಿಗಳಾಗಿರುತ್ತಾರೆ. (ಪು. 282 ಕೂಡ ನೋಡಿ).

### ಪ್ರವಾಸಿ ಕಚೇರಿ

ಪ್ರವಾಸೋದ್ಯೋಮ ಇಲಾಖೆಯ ಪ್ರವಾಸಿ ಕಚೇರಿಯು ಮಡಿಕೇರಿಯಲ್ಲಿ 1960 ರಲ್ಲಿ ಪ್ರಾರಂಭವಾಯಿತು. ಸದ್ಯ ಈ ಕಚೇರಿ ಸರಕಾರೀ ಪ್ರವಾಸೀ ಮಂದಿರದಲ್ಲಿದೆ. ಆರಂಭದಲ್ಲಿ ಇದು ಪ್ರವಾಸಿ ಅಧಿಕಾರಿ, ಪ್ರಾದೇಶಿಕ ಪ್ರವಾಸಿ, ಮೈಸೂರು ಅವರ ಅಧೀನಕ್ಕೆ ಒಳಪಟ್ಟಿದ್ದು ಈಗ ಇದು ಹಿರಿಯ ಉಪ ನಿರ್ದೇಶಕರು, ಪ್ರಾದೇಶಿಕ ಪ್ರವಾಸಿ ಕಚೇರಿ, ಮೈಸೂರು ಅವರ ಅಧಿಕಾರಕ್ಕೆ ಒಳಪಟ್ಟಿದೆ. ಪ್ರವಾಸೋದ್ಯಮ ಮಾಹಿತಿಯನ್ನು ಒದಗಿಸುವುದು ಇದರ ಮುಖ್ಯ ಕಾರ್ಯವಾಗಿರುತ್ತದೆ. ಈ ಕಚೇರಿಯಲ್ಲಿ ಒಬ್ಬ ಸ್ವಾಗತಕಾರರು ಹಾಗೂ ಇತರ ಸಹಾಯಕ ಸಿಬ್ಬಂದಿ ಇದ್ದಾರೆ.

### ಪ್ರಾದೇಶಿಕ ಸಾರಿಗೆ ಅಧಿಕಾರಿ

ಕೊಡಗು ಜಿಲ್ಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಚೇರಿಯು ಮಡಿಕೇರಿಯಲ್ಲಿ 1957 ರಲ್ಲಿ ಪ್ರಾರಂಭವಾಯಿತು. ಮೋಟಾರುವಾಹನಗಳನ್ನು ನೋಂದಾಯಿಸುವುದೂ, ಮೋಟಾರು ವಾಹನ ಚಾಲಕರುಗಳಿಗೆ ಹಾಗೂ ನಿರ್ವಾಹಕರುಗಳಿಗೆ ಪರವಾನೆ ನೀಡುವುದು, ವಾಹನ ತೆರಿಗೆಯನ್ನು ವಸೂಲು ಮಾಡುವುದು ಹಾಗೂ ವಾಹನಗಳ ಸಂಚಾರಕ್ಕೆ ರಹದಾರಿಯನ್ನು ನೀಡುವುದು, ಇವು ಇವರ ಕೆಲವು ಪ್ರಮುಖ ಕಾರ್ಯಗಳಾಗಿರುತ್ತವೆ. ಇವರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿರುತ್ತದೆ. ಅಧಿಕಾರಿಗಳ ನೆರವಿಗಾಗಿ ಒಬ್ಬ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಒಬ್ಬ ಕಚೇರಿ ಅಧೀಕ್ಷಕರು, ಒಬ್ಬ ಲೆಕ್ಕ ಅಧೀಕ್ಷಕರು, ಒಬ್ಬ ಹಿರಿಯ ಮೋಟಾರುವಾಹನ ನಿರೀಕ್ಷಕರು, ಇಬ್ಬರು ಮೋಟಾರು ವಾಹನ ನಿರೀಕ್ಷಕರು, ಒಬ್ಬ ಅಭಿಯೋಜಕ ನಿರೀಕ್ಷಕರು, ಐದು ಪ್ರಥಮ ದರ್ಜೆ ಸಹಾಯಕರು ಹಾಗೂ ಇತರ ಸಿಬ್ಬಂದಿ ಇದ್ದಾರೆ. ಇವರ ಅಧೀನವಾಗಿ ವೀರರಾಜಪೇಟೆ ಸಮೀಪದಲ್ಲಿರುವ ಮಾಕುಟ್ಟ ತನಿಖಾ ಠಾಣೆಯಲ್ಲಿ ಒಬ್ಬ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಕಾರ್ಯ ನಿರ್ವಹಿಸುತ್ತಿರುವರು. ಮೈಸೂರಿನಲ್ಲಿರುವ ಮೈಸೂರು ವಿಭಾಗದ ಉಪ-ಸಾರಿಗೆ ಆಯುಕ್ತರು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ. (ವಿವರಗಳಿಗೆ ಪುಟ 432-433 ನೋಡಿ)

### ಮಹಿಳೆಯರ, ಮಕ್ಕಳ ಕಲ್ಯಾಣ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಂದು ಪ್ರತ್ಯೇಕ ಕಚೇರಿಯು 1985 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಈ ಕಚೇರಿಗೆ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ, ಕೊಡಗು ಜಿಲ್ಲೆ ಎಂದು ನಾಮಾಂಕಿತವಾಗಿದ್ದು 1987 ರಲ್ಲಿ ಇದನ್ನು ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಎಂದು ಪುನರ್ನಾಮಕರಣ ಮಾಡಲಾಯಿತು. ಈ ಕಚೇರಿಯಲ್ಲಿ ಸಹಾಯಕ ನಿರ್ದೇಶಕರ ನೆರವಿಗಾಗಿ ಒಬ್ಬ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳು, ಒಬ್ಬ ಕಚೇರಿ ಅಧೀಕ್ಷಕರು, ಒಬ್ಬ ಬೆರಳಚ್ಚುಗಾರರು ಮತ್ತು ಒಬ್ಬ ವಾಹನ ಚಾಲಕರು ಇರುವರು. ಇವರ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಒಬ್ಬ ಬಾಲ ವಿಕಾಸ ಯೋಜನಾಧಿಕಾರಿಗಳು ಮತ್ತಿತರ ಸಿಬ್ಬಂದಿ ವರ್ಗದವರು ಕ್ರಮವಾಗಿ ಮಡಿಕೇರಿ, ಪೊನ್ನಂಪೇಟೆ (ವೀರರಾಜಪೇಟೆ ತಾ||ಗೆ) ಹಾಗೂ ಸೋಮವಾರಪೇಟೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ಅಲ್ಲದೆ ಮಡಿಕೇರಿಯಲ್ಲಿರುವ ಪರಿವೀಕ್ಷಣಾಧಿಕಾರಿಗಳು ಹಾಗೂ ಅಧೀಕ್ಷಕರು ಬಾಲನಿರೀಕ್ಷಣಾ ಮಂದಿರ, ಕೊಡಗು ಜಿಲ್ಲೆ ಮತ್ತು ಪರಿವೀಕ್ಷಣಾಧಿಕಾರಿಗಳು, ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, ಕೊಡಗು ಜಿಲ್ಲೆ ಇವರುಗಳು ಸಹಾಯಕ ನಿರ್ದೇಶಕರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ಬೆಂಗಳೂರಿನಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ. (ವಿವರಗಳಿಗೆ ಅಧ್ಯಾಯ 16 ನೋಡಿ).

### ಮಾರುಕಟ್ಟೆ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಮಾರುಕಟ್ಟೆ ಅಧಿಕಾರಿಯವರ ಕಚೇರಿಯು ಮಡಿಕೇರಿಯಲ್ಲಿ 1982 ರಲ್ಲಿ ಪ್ರಾರಂಭ

ವಾಯಿತು. 1987 ರಲ್ಲಿ ಇದನ್ನು ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಾಗಿ ಪರಿವರ್ತಿಸಲಾಯಿತು. ಜಿಲ್ಲೆಯಲ್ಲಿ ಕೃಷಿ ಮತ್ತು ಜಾನುವಾರು ಉತ್ಪನ್ನಗಳಿಗಾಗಿ ನಿಯಂತ್ರಿತ ಮಾರುಕಟ್ಟೆಗಳನ್ನು ಅಭಿವೃದ್ಧಿಗೊಳಿಸುವುದು, ಕೃಷಿ ಮತ್ತು ಜಾನುವಾರು ಉತ್ಪನ್ನಗಳ ಸಮೀಕ್ಷೆ ನಡೆಸುವುದು ಮತ್ತು ಮಾರುಕಟ್ಟೆಗಳ ದಾಸ್ತಾನು ವಿವರಗಳನ್ನು ಸಂಗ್ರಹಿಸಿ ಕ್ರೋಢೀಕರಿಸುವುದು ಇವರ ಪ್ರಮುಖ ಕಾರ್ಯವಾಗಿರುತ್ತದೆ. ಸಹಾಯಕ ನಿರ್ದೇಶಕರ ಕಾರ್ಯನಿರ್ವಹಣೆಯ ನೆರವಿಗಾಗಿ ಒಬ್ಬ ಮಾರುಕಟ್ಟೆ ನಿರೀಕ್ಷಕರು, ಒಬ್ಬ ಪ್ರಥಮ ದರ್ಜೆ ಸಹಾಯಕರು ಹಾಗೂ ಇತರ ಸಿಬ್ಬಂದಿ ಇದ್ದಾರೆ. ಈ ಕಚೇರಿಯ ಅಧೀನದಲ್ಲಿ ಮಡಿಕೇರಿಯಲ್ಲಿರುವ ಜೇನು ವರ್ಗೀಕರಣ ಕೇಂದ್ರ ಮತ್ತು ಮಡಿಕೇರಿ, ಗೋಣಿಕೊಪ್ಪಲು ಹಾಗೂ ಸೋಮವಾರಪೇಟೆಯಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆ. ಮೈಸೂರಿನಲ್ಲಿರುವ ಮೈಸೂರು ವಿಭಾಗದ ಕೃಷಿಮಾರುಕಟ್ಟೆ ಇಲಾಖೆಯ ಜಂಟಿ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ. (ವಿವರಗಳಿಗೆ ಪುಟ 402–404 ನೋಡಿ).

### ಮೀನುಗಾರಿಕೆ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಮೀನುಗಾರಿಕೆ ಪರಿವೀಕ್ಷಕರ ಕಚೇರಿಯು 1958ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಗಿ, 1987ರಲ್ಲಿ ಈ ಕಚೇರಿಯು ಮೀನುಗಾರಿಕೆ ಸಹಾಯಕ ನಿರ್ದೇಶಕರು ಶ್ರೇಣಿ–1, ಎಂದು ಬದಲಾವಣೆಯಾಯಿತು. ಇವರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿದೆ. ಉತ್ತಮ ತಳಿ ಮೀನು ಮರಿಗಳನ್ನು ತರಿಸುವುದು ಹಾಗೂ ಉತ್ಪಾದಿಸಿ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ದಾಸ್ತಾನು ಮಾಡುವುದು, ಹಾರಂಗಿ ಮೀನು ಉತ್ಪಾದನಾ ಕೇಂದ್ರದಲ್ಲಿ ಮೀನುಮರಿಗಳನ್ನು ಉತ್ಪಾದಿಸಿ ಅವುಗಳನ್ನು ಬೆರಳಿನ ಉದ್ದಕ್ಕೆ ಸಾಕುವುದು, ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಜಾರಿಗೆ ತರುವುದು ಇವೇ ಮುಂತಾದ ಒಳನಾಡಿನ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಇವರ ಮುಖ್ಯ ಕಾರ್ಯಗಳಾಗಿರುತ್ತದೆ. ಕಚೇರಿಯ ನಿರ್ವಹಣೆಯಲ್ಲಿ ಅಧಿಕಾರಿಗಳ ನೆರವಿಗಾಗಿ ಒಬ್ಬ ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಒಬ್ಬ ಬೆರಳಚ್ಚುಗಾರರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಈ ಕಚೇರಿಯ ಅಧೀನದಲ್ಲಿ ತಾಲೂಕಿನ ಪರಿಮಿತಿಯಲ್ಲಿ ಕಾರ್ಯ ನಿರ್ವಹಿಸಲು ಮಡಿಕೇರಿ, ಸೋಮವಾರಪೇಟೆ ಹಾಗೂ ಪೊನ್ನಂಪೇಟೆಗಳಲ್ಲಿ (ವೀರರಾಜಪೇಟೆ ತಾ||ಕಿಗೆ) ಮೀನುಗಾರಿಕೆ ಸಹಾಯಕ ನಿರ್ದೇಶಕರು ಶ್ರೇಣಿ-1 ಕಾರ್ಯನಿರ್ವಹಿಸುತ್ತಿರುವುದೇ ಅಲ್ಲದೆ ಹಾರಂಗಿ ಮೀನು ಮರಿ ಉತ್ಪಾದನಾ ಕೇಂದ್ರದಲ್ಲಿ ಒಬ್ಬ ಮೀನುಗಾರಿಕೆ ಸಹಾಯಕ ನಿರ್ದೇಶಕರು-ಶ್ರೇಣಿ 2 ಕಾರ್ಯ ನಿರ್ವಹಿಸುತ್ತಿರುವರು. ಮಡಿಕೇರಿಯಲ್ಲಿರುವ ಕೊಡಗು ಜಿಲ್ಲಾ ಪರಿಷತ್ತು ಇವರ ತಕ್ಷಣದ ಮೇಲಧಿಕಾರಿ ಅವರ ಕಚೇರಿಯಾಗಿರುತ್ತದೆ.

### ಯುವಜನ ಸೇವಾ ಮತ್ತು ಕ್ರೀಡೆ

ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ಕಚೇರಿಯು ಮಡಿಕೇರಿಯಲ್ಲಿ 1975ರಲ್ಲಿ ಪ್ರಾರಂಭವಾಯಿತು. ಯುವಜನರ ಪ್ರತಿಭೆಯನ್ನು ಗುರುತಿಸಿ ಸಾಮಾಜಿಕ, ಸಾಂಸ್ಕೃತಿಕ, ಮತ್ತು ಕ್ರೀಡಾ ಚಟುವಟಿಕೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ, ತರಬೇತಿ ನೀಡುವುದು, ಕ್ರೀಡಾಸ್ಪರ್ಧೆ ಹಾಗೂ ದಸರಾ ಕ್ರೀಡೆಗಳನ್ನು ನಡೆಸುವುದು ಇದರ ಪ್ರಮುಖ ಕಾರ್ಯವಾಗಿರುತ್ತದೆ. ಇವರ ನೆರವಿಗಾಗಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಜಿಲ್ಲಾ ತರಬೇತುದಾರರು, ಶ್ರೀಘ್ರ ಲಿಪಿಗಾರರು ಇತರ ಸಿಬ್ಬಂದಿ ವರ್ಗ ಇರುತ್ತಾರೆ. ಇವರ ಅಧೀನದಲ್ಲಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ಕಚೇರಿಯು ಕಾರ್ಯನಿರ್ವಹಿಸುತ್ತಿದೆ. ಕೊಡಗು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ರಾಜ್ಯ ಲೆಕ್ಕ ಪತ್ರ ಇಲಾಖೆ

ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲವು ಮಡಿಕೇರಿಯಲ್ಲಿ 1986ರಲ್ಲಿ ಪ್ರಾರಂಭವಾಯಿತು. ಇದರ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿದ್ದು ಸಹಾಯಕ ನಿಯಂತ್ರಕರು ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಸ್ಥಳೀಯ ಸಂಸ್ಥೆಗಳ ಲೆಕ್ಕ ತಪಾಸಣೆ ನಡೆಸುವುದು ಈ ಕಚೇರಿಯ ಮುಖ್ಯ ಕರ್ತವ್ಯವಾಗಿರುತ್ತದೆ. ಕಚೇರಿಯಲ್ಲಿ ಅಧಿಕಾರಿಗಳ ನೆರವಿಗಾಗಿ ಒಬ್ಬರು ಆಡಿಟ್ ಆಫೀಸರ್, ಆರು ಜನ ಪ್ರಥಮ ದರ್ಜೆ ಸಹಾಯಕರು ಹಾಗೂ ಇತರ ನೌಕರರು ಇರುತ್ತಾರೆ. ಬೆಂಗಳೂರಿನಲ್ಲಿರುವ ರಾಜ್ಯ ಲೆಕ್ಕ ಪತ್ರ ಇಲಾಖೆಯ ನಿಯಂತ್ರಕರು ಈ ಕಚೇರಿಯ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

### ರೇಷ್ಮೆ ಇಲಾಖೆ

ಕೊಡಗು ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯ ಮತ್ತು ಸಂಬಂಧಿಸಿದ ಇತರ ಚಟುವಟಿಕೆಗಳನ್ನು ನೋಡಿಕೊಳ್ಳಲು ರೇಷ್ಮೆ

ಸಹಾಯಕ ನಿರ್ದೇಶಕರ ಕಚೇರಿಯು 1980ರಲ್ಲಿ ಆರಂಭವಾಯಿತು. ಈಗ ಇದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಹಿಂದೆ ಕೊಡಿಗೆಯಲ್ಲಿನ ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರದ ರೇಷ್ಮೆ ಸಹಾಯಕರು ಜಿಲ್ಲೆಯ ರೇಷ್ಮೆ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದರು. ಅಧಿಕಾರಿಗಳ ನೆರವಿಗಾಗಿ ಕಚೇರಿಯಲ್ಲಿ ಒಬ್ಬ ಕಚೇರಿ ಅಧೀಕ್ಷಕರು, ಒಬ್ಬ ಪ್ರಥಮ ದರ್ಜೆ ಸಹಾಯಕರು, ಒಬ್ಬ ರೇಷ್ಮೆ ನಿರೀಕ್ಷಕರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಇವರ ಅಧೀನದಲ್ಲಿ ಹಿರಿಯ ರೇಷ್ಮೆ ನಿರೀಕ್ಷಕರು, ರೇಷ್ಮೆ ವಿಸ್ತರಣಾ ಕೇಂದ್ರ, ಸೋಮವಾರಪೇಟೆ; ರೇಷ್ಮೆ ವಿಸ್ತರಣಾಧಿಕಾರಿಗಳು, ಗಿರಿಜನ ವಿಸ್ತರಣಾ ಕೇಂದ್ರ, ವೀರರಾಜಪೇಟೆ ಮತ್ತು ರೇಷ್ಮೆ ವಿಸ್ತರಣಾಧಿಕಾರಿಗಳು, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಕೊಡಿಗೆ ಇವರು ನಿರ್ವಹಿಸುತ್ತಿರುವರು. ಮೈಸೂರಿನ ರೇಷ್ಮೆ ಉಪನಿರ್ದೇಶಕರು ಇವರ ಮೇಲಧಿಕಾರಿಯಾಗಿರುತ್ತಾರೆ.

### ಲೋಕ ಶಿಕ್ಷಣ ಇಲಾಖೆ

ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಚೇರಿಯು 1980ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಅಕ್ಷರಸೇನೆ ಯೋಜನೆಯನ್ನು ಕಾರ್ಯಗತಗೊಳಿಸುವುದು ಮತ್ತು ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯ ಮೇಲ್ವಿಚಾರಣೆ ನಡೆಸುವುದು ಈ ಅಧಿಕಾರಿಗಳ ಮುಖ್ಯ ಜವಾಬ್ದಾರಿಯಾಗಿರುತ್ತದೆ. ಅಧಿಕಾರಿಗಳ ನೆರವಿಗಾಗಿ ಕಚೇರಿಯಲ್ಲಿ ಒಬ್ಬ ಸಹಾಯಕ ಸಂಖ್ಯಾಧಿಕಾರಿ, ಒಬ್ಬ ಎರಡನೇಯ ದರ್ಜೆ ಸಹಾಯಕರು ಹಾಗೂ ಅನ್ಯ ಸಿಬ್ಬಂದಿ ಇದೆ. ಈ ಕಚೇರಿಯ ಅಧೀನದಲ್ಲಿ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯ ವಿಭಾಗ ಕೆಲಸ ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿರುವ ಲೋಕ ಶಿಕ್ಷಣ ಇಲಾಖೆಯ ನಿರ್ದೇಶಕರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ.

### ಲೋಕೋಪಯೋಗಿ ಇಲಾಖೆ

ಸ್ವಾತಂತ್ರ್ಯ ಪೂರ್ವದಲ್ಲಿ ಕೊಡಗು ತನ್ನದೇ ಆದ ಲೋಕೋಪಯೋಗಿ ಇಲಾಖೆಯನ್ನು ಹೊಂದಿದ್ದು ಅದರಡಿಯಲ್ಲಿ ವಿಭಾಗೀಯ ಕಚೇರಿಯು ಕಾರ್ಯನಿರ್ವಹಿಸುತ್ತಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ ಇಲಾಖೆಯ ಖರ್ಚನ್ನು ಮಿತಗೊಳಿಸುವ ಸಲುವಾಗಿ ಅದನ್ನು ಒಂದು ಉಪವಿಭಾಗೀಯ ಕಚೇರಿಯನ್ನಾಗಿ ಪರಿವರ್ತಿಸಲಾಯಿತು. 1956ರಲ್ಲಿ ರಾಜ್ಯ ಪುನರ್ವಿಂಗಡನೆಯಾದಾಗ ಎಕ್ಸಿಕ್ಯೂಟಿವ್ ಇಂಜನಿಯರ್ ಅವರ ಕಚೇರಿ, ಲೋಕೋಪಯೋಗಿ ಇಲಾಖೆ ಕೊಡಗು ವಿಭಾಗವು ಮಡಿಕೇರಿಯಲ್ಲಿ ಪ್ರಾರಂಭವಾಯಿತು. 1973ರಿಂದ ಇದನ್ನು ಕಾರ್ಯನಿರ್ವಾಹಕ (ಎಕ್ಸಿಕ್ಯುಟಿವ್) ಇಂಜನಿಯರ್‌ರವರ ಕಚೇರಿ, ಕೊಡಗು ವಿಭಾಗವೆಂದು ಕರೆಯಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ಬರುವ ರಾಜ್ಯ ಹೆದ್ದಾರಿಗಳು, ಜಿಲ್ಲಾ ಮತ್ತು ಗ್ರಾಮಾಂತರ ರಸ್ತೆಗಳು, ಸೇತುವೆಗಳು, ಸರ್ಕಾರಿ ಕಟ್ಟಡಗಳು ಇವೇ ಮುಂತಾದವುಗಳನ್ನು ನಿರ್ಮಿಸುವುದು ಹಾಗೂ ಉಸ್ತುವಾರಿ ಮಾಡುವುದು ಈ ಕಚೇರಿಯ ಮುಖ್ಯ ಕರ್ತವ್ಯವಾಗಿದೆ. ಕಾರ್ಯನಿರ್ವಾಹಕ ಇಂಜನಿಯರ್‌ರ ನೆರವಿಗಾಗಿ ಒಬ್ಬ ತಾಂತ್ರಿಕ ಸಹಾಯಕರು, ಇಬ್ಬರು ಸಹಾಯಕ ಇಂಜನಿಯರ್, ನಾಲ್ಕುಜನ ಜೂನಿಯರ್ ಇಂಜನಿಯರ್ ಮತ್ತಿತರ ಸಿಬ್ಬಂದಿಗಳನ್ನೊಳಗೊಂಡಂತೆ 44 ಹುದ್ದೆಗಳಿವೆ. ಈ ಕಚೇರಿಯ ಅಧೀನದಲ್ಲಿ ಮಡಿಕೇರಿ, ಸೋಮವಾರಪೇಟೆ ಹಾಗೂ ವೀರರಾಜಪೇಟೆಗಳಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜನಿಯರ್ ಇರುವ ಉಪವಿಭಾಗ ಕಚೇರಿಗಳಿವೆ. ಮಂಗಳೂರಿನಲ್ಲಿರುವ ಲೋಕೋಪಯೋಗಿ ಇಲಾಖೆಯ ಸೂಪರಿಂಟೆಂಡಿಂಗ್ ಇಂಜನಿಯರ್ ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ವಾರ್ತಾ ಇಲಾಖೆ

ಕೊಡಗು ಜಿಲ್ಲೆಯಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕಾರ್ಯಕ್ರಮಗಳನ್ನು ನಿರ್ವಹಿಸಲು ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳ ಕಚೇರಿ ಇದೆ. ಈ ಕಚೇರಿಯಲ್ಲಿ ಒಬ್ಬ ವಾರ್ತಾ ಸಹಾಯಕರೂ, ಒಬ್ಬ ಶ್ರವಣ-ದೃಶ್ಯ ಮೇಲ್ವಿಚಾರಕರು (ಆಡಿಯೋವಿಶ್ಯುಯಲ್ ಸೂಪರ್‌ವೈಸರ್), ಒಬ್ಬ ಪ್ರಥಮ ದರ್ಜೆ ಸಹಾಯಕರೂ, ಒಬ್ಬ ಗ್ರಂಥಪಾಲಕ ಹಾಗೂ ಸ್ವಾಗತಗಾರರೂ ಮತ್ತಿತರ ಸಿಬ್ಬಂದಿ ವರ್ಗದವರು ಇರುತ್ತಾರೆ. ಸರ್ಕಾರದ ವಾರ್ತೆಗಳನ್ನು, ವಿವಿಧ ಯೋಜನೆಗಳನ್ನು ಮತ್ತು ಸರ್ಕಾರದ ಸಾಧನೆಗಳನ್ನು ಪ್ರಚಾರ ಮಾಡುವುದು ಮತ್ತು ಜಿಲ್ಲೆಯ ಪ್ರಗತಿಯ ಬಗ್ಗೆ ಪ್ರಕಟಣೆಗಳನ್ನು ಹೊರತರುವುದು, ಆ ಬಗ್ಗೆ ಪ್ರಚಾರ ಮಾಡುವುದು ಈ ಕಚೇರಿಯ ಕೆಲವು ಪ್ರಮುಖ ಕಾರ್ಯಗಳಾಗಿರುತ್ತವೆ. ಮೈಸೂರಿನಲ್ಲಿರುವ ವಾರ್ತಾ ಮತ್ತು ಪ್ರಚಾರ ಇಲಾಖೆಯ ಉಪನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

### ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಅಧಿಕಾರಿಯವರ ಕಚೇರಿಯು ಮಡಿಕೇರಿಯಲ್ಲಿ 1966ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಮೊದಲು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿಯಿದ್ದು ಇದು ಮೈಸೂರು ವಿಭಾಗದ ವಾಣಿಜ್ಯ ತೆರಿಗೆ ಉಪಆಯುಕ್ತರ

ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಇದರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿದೆ. 1.4.88 ರಲ್ಲಿ ಕಚೇರಿ ಆಡಳಿತವನ್ನು ಒಂದನೇಯ ವೃತ್ತ ಮತ್ತು ಎರಡನೇಯ ವೃತ್ತವೆಂದು ವಿಭಾಗಿಸಿ ಪ್ರತೀ ವೃತ್ತಕ್ಕೂ ಒಬ್ಬ ವಾಣಿಜ್ಯ ತೆರಿಗೆ ಅಧಿಕಾರಿಯನ್ನು ನೇಮಿಸಲಾಯಿತು. ಒಂದನೇಯ ವೃತ್ತದ ಅಧಿಕಾರ ವ್ಯಾಪ್ತಿಯು ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕು (ಕುಶಾಲನಗರ ಹೋಬಳಿಯ ವಿನಾ)ಗಳನ್ನೊಳಗೊಂಡಿದ್ದು ವೀರರಾಜಪೇಟೆ ತಾಲೂಕು ಮತ್ತು ಕುಶಾಲನಗರ ಹೋಬಳಿಯು ಎರಡನೇಯ ವೃತ್ತದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. 1990 ರಿಂದ ಒಂದನೇಯ ವೃತ್ತದಲ್ಲಿ ಎರಡು ವಾಣಿಜ್ಯ ತೆರಿಗೆ ಅಧಿಕಾರಿಗಳಿದ್ದಾರೆ. ಪ್ರತೀ ವೃತ್ತದಲ್ಲಿ ಒಬ್ಬ ವಾಣಿಜ್ಯ ತೆರಿಗೆ ನಿರೀಕ್ಷಕರು, ಇಬ್ಬರು ಮೊದಲ ದರ್ಜೆ ಸಹಾಯಕರು, ಇಬ್ಬರು ಎರಡನೇಯ ದರ್ಜೆ ಸಹಾಯಕರು ಹಾಗೂ ಇತರ ಸಿಬ್ಬಂದಿ ಇರುತ್ತಾರೆ. ಮಂಗಳೂರಿನಲ್ಲಿರುವ ವಾಣಿಜ್ಯ ತೆರಿಗೆ ಉಪ ಆಯುಕ್ತರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ.

### ವಿಮಾ ಇಲಾಖೆ

ಜಿಲ್ಲಾ ವಿಮಾ ಅಧಿಕಾರಿಯವರ ಕಚೇರಿಯು ಮಡಿಕೇರಿಯಲ್ಲಿ 1979 ರಲ್ಲಿ ಪ್ರಾರಂಭವಾಯಿತು. ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ನೌಕರರನ್ನು ಕಡ್ಡಾಯ ಜೀವ ವಿಮೆ ಯೋಜನೆಗೆ ಒಳಪಡಿಸುವುದು ಇದರ ಪ್ರಮುಖ ಕಾರ್ಯವಾಗಿದೆ. ಜಿಲ್ಲಾ ವಿಮಾ ಅಧಿಕಾರಿಗಳ ಸಹಾಯಕ್ಕಾಗಿ ಇಬ್ಬರು ಅಧೀಕ್ಷಕರು, ನಾಲ್ಕು ಪ್ರಥಮ ದರ್ಜೆ ಸಹಾಯಕರು, ಐದು ದ್ವಿತೀಯ ದರ್ಜೆ ಸಹಾಯಕರು ಮತ್ತು ಇತರ ಸಿಬ್ಬಂದಿ ಇದ್ದಾರೆ. ಮೈಸೂರಿನಲ್ಲಿರುವ ಕರ್ನಾಟಕ ಸರ್ಕಾರದ ವಿಮಾ ಇಲಾಖೆಯ ಉಪ ನಿರ್ದೇಶಕರು ಈ ಕಚೇರಿಯ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ವೀಕ್ಷಣಾಲಯ (ರಿಮಾಂಡ್ ಹೋಂ)

ಕೊಡಗು ಜಿಲ್ಲೆಯಲ್ಲಿ ವೀಕ್ಷಣಾಲಯವು ಮಡಿಕೇರಿಯಲ್ಲಿ 1971 ರಲ್ಲಿ ಪ್ರಾರಂಭವಾಯಿತು. ನಿರ್ಲಕ್ಷಿತ, ನಿಯಂತ್ರಣಕ್ಕೊಳಪಡದ, ಅನಾಥ ಹಾಗೂ ನಿರಾಶ್ರಿತ ಮತ್ತು ಬಾಲಾಪರಾಧ ಮಾಡಿರುವ ಮಕ್ಕಳನ್ನು ವೀಕ್ಷಣೆ ಮಾಡಿ ನ್ಯಾಯಾಧೀಶರ ಆದೇಶದಂತೆ ಪೋಷಕರ ಅಥವಾ ಪ್ರಮಾಣಿತ ಶಾಲೆಗೆ ದಾಖಲು ಮಾಡುವುದು ಇದರ ಕಾರ್ಯವ್ಯಾಪ್ತಿಯಾಗಿದೆ. ಪರಿವೀಕ್ಷಣಾಧಿಕಾರಿ ಹಾಗೂ ಅಧೀಕ್ಷಕರು ಇದರ ಮುಖ್ಯಾಧಿಕಾರಿಯಾಗಿರುತ್ತಾರೆ. ಇವರ ಸಹಾಯಕ್ಕಾಗಿ ಒಬ್ಬ ಎರಡನೇ ದರ್ಜೆ ಸಹಾಯಕರು, ಒಬ್ಬ ಗೃಹ ಮಾತೆ, ಮೂವರು ರಕ್ಷಕರು, ಒಬ್ಬ ಬಾಣಸಿಗರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಮಡಿಕೇರಿಯಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ. (ಅಧ್ಯಾಯ 16 ನೋಡಿ).

### ಶಿಕ್ಷಣ ಇಲಾಖೆ

ಮಡಿಕೇರಿಯಲ್ಲಿ ಕೊಡಗು ರಾಜ್ಯ ಶಿಕ್ಷಣಾಧಿಕಾರಿಗಳ ಕಚೇರಿಯು 1939 ರಲ್ಲಿ ಪ್ರಾರಂಭವಾಯಿತು. ಕೊಡಗು ಪ್ರತ್ಯೇಕ ರಾಜ್ಯವಾಗಿದ್ದಾಗ ಕಚೇರಿಯು ಇದೇ ಹೆಸರಿನಲ್ಲಿ ಮುಂದುವರೆದು 1956 ರಲ್ಲಿ ಕೊಡಗು ಒಂದು ಜಿಲ್ಲೆಯಾಗಿ ಮಾರ್ಪಟ್ಟ ನಂತರ ಜಿಲ್ಲಾ ವಿದ್ಯಾಧಿಕಾರಿಗಳು ಈ ಕಚೇರಿಯ ಮುಖ್ಯಸ್ಥರಾದರು. 1-4-1970 ರಲ್ಲಿ ಈ ಕಚೇರಿಯನ್ನು ಉಪ ನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಎಂದು ಪರಿವರ್ತಿಸಲಾಯಿತು. ಇವರ ಕಚೇರಿಯಲ್ಲಿ ಒಬ್ಬ ವಿದ್ಯಾಧಿಕಾರಿಗಳು, ಐದು ವಿಷಯ ಪರಿವೀಕ್ಷಕರು, ಒಬ್ಬ ದೈಹಿಕ ಶಿಕ್ಷಣ ಅಧೀಕ್ಷಕರು, ಒಬ್ಬ ಹಿಂದಿ ಪ್ರಚಾರಕರು, ಒಬ್ಬ ಪತ್ರಾಂಕಿತ ಸಹಾಯಕರು, ಒಬ್ಬ ಚಲನಚಿತ್ರ ವ್ಯವಸ್ಥಾಪಕರೂ ಮತ್ತಿತರ ಸಿಬ್ಬಂದಿ ವರ್ಗದವರು ಇರುತ್ತಾರೆ. ಜಿಲ್ಲೆಯಲ್ಲಿನ ಪ್ರತೀ ತಾಲೂಕಿಗೂ ಒಬ್ಬೊಬ್ಬ ಸಹಾಯಕ ಶಿಕ್ಷಣಾಧಿಕಾರಿಗಳಿದ್ದು ಅವರ ಕಚೇರಿಗಳು ಈ ಜಿಲ್ಲಾ ಅಧಿಕಾರಿಯ ಅಧೀನಕ್ಕೆ ಒಳಪಟ್ಟಿರುತ್ತವೆ. ತಾಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳ ಆಡಳಿತ ಸಂಪೂರ್ಣ ಹತೋಟಿಯು ಆಯಾ ತಾಲೂಕಿನ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಸೇರಿದ್ದು, ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಮತ್ತು ಮುಖ್ಯ ಕಾರ್ಯದರ್ಶಿಗಳು, ಕೊಡಗು ಜಿಲ್ಲಾ ಪರಿಷತ್ ಮಡಿಕೇರಿ ಇವರು ಜಿಲ್ಲೆಯ ಉಪ ನಿರ್ದೇಶಕರ ಮೇಲಧಿಕಾರಿಗಳಾಗಿರುತ್ತಾರೆ. (ಅಧ್ಯಾಯ 13 ಕೂಡ ನೋಡಿ)

### ಸರ್ಕಾರಿ ಶಾಖಾ ಮುದ್ರಣಾಲಯ

ಸರ್ಕಾರಿ ಮುದ್ರಣಾಲಯವು ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿದ್ದಾಗ 1954 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. 1956 ರಲ್ಲಿ ರಾಜ್ಯ ಪುನರ್ವಿಂಗಡಣೆಯಾದ ನಂತರ ಇದು ಸರ್ಕಾರಿ ಶಾಖಾ ಮುದ್ರಣಾಲಯವೆನಿಸಿಕೊಂಡಿತು. ಸಹಾಯಕ ನಿರ್ದೇಶಕರು ಇದರ ಮುಖ್ಯ ಅಧಿಕಾರಿಯಾಗಿದ್ದು ಇವರ ಆಡಳಿತ ಸಹಾಯಕ್ಕಾಗಿ ಒಬ್ಬ ಮೇಲ್ವಿಚಾರಕರು, ಒಬ್ಬ ಪ್ರಥಮ ದರ್ಜೆ ಸಹಾಯಕರು,

ಒಬ್ಬ ದ್ವಿತೀಯ ದರ್ಜೆ ಸಹಾಯಕರು, ಒಬ್ಬ ಬೆರಳಚ್ಚುಗಾರರು, ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಅಲ್ಲದೆ ಮುದ್ರಣ ಕಾರ್ಯ ಮತ್ತು ರಟ್ಟು ಕಟ್ಟುವ ಕೆಲಸಗಳಿಗಾಗಿ ವಿವಿಧ ಹುದ್ದೆಗಳ ನೌಕರರಿರುವರು. ಈ ಮುದ್ರಣಾಲಯದಲ್ಲಿ 60 ಮಂಜೂರಾದ ಹುದ್ದೆಗಳಿವೆ. ಬೆಂಗಳೂರಿನಲ್ಲಿರುವ ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಕೇಂದ್ರ ಮುದ್ರಣಾಲಯ ಇವರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ. (ವಿವರಕ್ಕೆ ಪುಟ 315 ನೋಡಿ)

### ಸಮಗ್ರ ಪರಿಶಿಷ್ಟ ವರ್ಗ ಅಭಿವೃದ್ಧಿ ಯೋಜನಾ ಕಚೇರಿ

ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಉಪ ಯೋಜನೆಯನ್ನು ಜಾರಿಗೊಳಿಸಲು ಮಡಿಕೇರಿಯಲ್ಲಿ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಇದೆ. ಈ ಯೋಜನೆಯು 1976–77ನೇ ಸಾಲಿನಲ್ಲಿ ಆರಂಭವಾಯಿತು. ಸಮನ್ವಯಾಧಿಕಾರಿಗಳ ನೆರವಿಗಾಗಿ ಒಬ್ಬ ಅಧೀಕ್ಷಕರು, ನಾಲ್ಕು ಪರಿಶಿಷ್ಟ ವರ್ಗ ಕಲ್ಯಾಣ ವಿಸ್ತರಣಾಧಿಕಾರಿಗಳು, ಒಬ್ಬ ಪ್ರಥಮ ದರ್ಜೆ ಸಹಾಯಕರು, ಒಬ್ಬ ಲೆಕ್ಕಿಗರು, ಒಬ್ಬ ದ್ವಿತೀಯ ದರ್ಜೆ ಸಹಾಯಕರು, ಒಬ್ಬ ಬೆತ್ತ-ಬಿದಿರು ಹೆಣಿಕೆ ಶಿಕ್ಷಕರು, ಒಬ್ಬ ಜೇನು ಕೃಷಿ ಸಹಾಯಕರು, ನಾಲ್ಕು ದಾದಿಯರು ಮುಂತಾದ ಸಿಬ್ಬಂದಿ ಇದ್ದಾರೆ. ತಾಲೂಕು ಮಟ್ಟದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ವಿಸ್ತರಣಾಧಿಕಾರಿಗಳ ನೆರವಿನಿಂದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮುಖಾಂತರ ವಿವಿಧ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. (ಅಧ್ಯಾಯ 16 ನೋಡಿ).

### ಸಮಾಜ ಕಲ್ಯಾಣ ಇಲಾಖೆ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಚೇರಿಯು ಮಡಿಕೇರಿಯಲ್ಲಿ 1956ರಲ್ಲಿ ಪ್ರಾರಂಭವಾಯಿತು. ಆರಂಭದಲ್ಲಿ ಈ ಕಚೇರಿಯ ಮುಖ್ಯಾಧಿಕಾರಿಗಳ ಹುದ್ದೆಯ ಹೆಸರು ಅನುಸೂಚಿತ ಜಾತಿಯ ವಿಶೇಷ ಅಧಿಕಾರಿ ಎಂದಿದ್ದು 1965ರಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಎಂದು ಬದಲಾವಣೆಯಾಯಿತು. ಈ ಕಚೇರಿಯ ಅಧಿಕಾರ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾದದು. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಈ ಕಚೇರಿಯ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಕಚೇರಿಯಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಾರ್ಯದಲ್ಲಿ ನೆರವಾಗಲು ಒಬ್ಬ ಕಚೇರಿ ಅಧೀಕ್ಷಕರು, ಒಬ್ಬ ವಿಶೇಷ ಘಟಕ ಯೋಜನೆ ಅಧೀಕ್ಷಕರು, ಒಬ್ಬ ಪರಿವೀಕ್ಷಕ ಸಹಾಯಕರು ಹಾಗೂ ಇತರ ನೌಕರರು ಇದ್ದಾರೆ. ಜಿಲ್ಲೆಯ ಮೂರು ತಾಲೂಕುಗಳಲ್ಲೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಅಧೀನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳು ಮತ್ತಿತರ ಸಿಬ್ಬಂದಿಗಳನ್ನೊಳಗೊಂಡಂತೆ ಒಟ್ಟು 99 ಹುದ್ದೆಗಳಿವೆ. ಜಿಲ್ಲಾ ಮಟ್ಟದಲ್ಲಿ ಕೊಡಗು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಮತ್ತು ರಾಜ್ಯ ಮಟ್ಟದಲ್ಲಿ ಬೆಂಗಳೂರಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ. (ಅಧ್ಯಾಯ 16 ನೋಡಿ).

### ಸಹಕಾರ ತರಬೇತಿ ಕೇಂದ್ರ

ಸಹಕಾರ ತರಬೇತಿ ಕೇಂದ್ರವು ಮಡಿಕೇರಿಯಲ್ಲಿ 1955ರಲ್ಲಿ ಪ್ರಾರಂಭವಾಯಿತು. ಪ್ರಾಂಶುಪಾಲರು ಈ ಕೇಂದ್ರದ ಮುಖ್ಯಾಧಿಕಾರಿಯಾಗಿದ್ದು ಇವರ ಅಧೀನದಲ್ಲಿ ಮೂವರು ಉಪನ್ಯಾಸಕರು ಹಾಗೂ ಇತರ ಸಿಬ್ಬಂದಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿರುವರು. ಸಹಕಾರಿ ಸಂಸ್ಥೆಗಳ ಹಾಗೂ ಸಹಕಾರಿ ಇಲಾಖೆಯ ಕಿರಿಯ ನೌಕರರಿಗೆ ತರಬೇತಿಯನ್ನು ನೀಡುವುದು ಇದರ ಪ್ರಧಾನ ಕಾರ್ಯವಾಗಿದೆ. ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ಸಹಕಾರ ಇಲಾಖೆ

ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿದ್ದಾಗ ಸಹಕಾರಿ ಸಂಘಗಳ ನಿಬಂಧಕರು ಇಲಾಖೆಯ ಮುಖ್ಯಸ್ಥರಾಗಿದ್ದರು. ರಾಜ್ಯ ಪುನರ್ವಿಂಗಡನೆಯಾದ ನಂತರ 1956ರಲ್ಲಿ ಮಡಿಕೇರಿಯಲ್ಲಿ ಸಹಾಯಕ ನಿಬಂಧಕರ ಕಚೇರಿಯು ಪ್ರಾರಂಭವಾಗಿದ್ದು, 1971ರಲ್ಲಿ ಉಪ ನಿಬಂಧಕರ ಕಚೇರಿಯು ಪ್ರಾರಂಭವಾಯಿತು. ಜನರ ಆವಶ್ಯಕತೆಗಳಿಗನುಗುಣವಾಗಿ ಸಹಕಾರಿ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಸಹಕಾರಿ ಸಂಸ್ಥೆಗಳನ್ನು ಸಂಘಟಿಸುವುದು ಉಪ ನಿಬಂಧಕರ ಜವಾಬ್ದಾರಿಯಾಗಿರುತ್ತದೆ. ಇವರು ಸಹಕಾರಿ ಸಂಘಗಳ ಕಾಯ್ದೆ 1959 ಇದನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುವುದೇ ಅಲ್ಲದೆ ಸರ್ಕಾರವು ಆವಶ್ಯಬಿದ್ದಾಗ ಇವರಿಗೆ ವಹಿಸುವ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಅಲ್ಲದೆ ಜಿಲ್ಲೆಯ ಎಲ್ಲಾ ಸಹಕಾರಿ ಸಂಘಗಳ ಮೇಲ್ವಿಚಾರಣೆ ಮಾಡುವುದು ಇವರ ಜವಾಬ್ದಾರಿಯಾಗಿರುತ್ತದೆ. ಇವರು ಜಿಲ್ಲೆಯ ಲೇವಾದೇವಿಗಾರರ ಹಾಗೂ ಗಿರವಿ ಅಂಗಡಿಗಳ ಪದನಿಮಿತ್ತ ನಿಬಂಧಕರಾಗಿದ್ದು ಅವರಿಗೆ ಪರವಾನಗಿ

ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. ಉಪ ನಿಬಂಧಕರ ಸಹಾಯಕ್ಕಾಗಿ ಒಬ್ಬ ಜಿಲ್ಲಾ ಮೇಲ್ವಿಚಾರಕರು (ಗ್ರಾಹಕರ ಸಂಘ), ಇಬ್ಬರು ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಒಬ್ಬ ಅಧೀಕ್ಷಕರು, ಮೂವರು ಹಿರಿಯ ನಿರೀಕ್ಷಕರು, ಒಬ್ಬ ಅಂಕಿ-ಅಂಶ ನಿರೀಕ್ಷಕರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಈ ಕಚೇರಿಯ ಅಧೀನತೆಯಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಡಿಕೇರಿ ಮತ್ತು ವಸೂಲಾತಿ ಅಧಿಕಾರಿ, ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿಯಮಿತ), ಮಡಿಕೇರಿ ಇವರುಗಳು ಕಾರ್ಯ ನಿರ್ವಹಿಸುತ್ತಿರುವರು. ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಮೈಸೂರು ವಿಭಾಗ, ಮೈಸೂರು ಇವರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ.

### ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಇಲಾಖೆ

ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜಿಲ್ಲಾ ಮಟ್ಟದ ಕಚೇರಿಯು 1977ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಇವರ ಮುಖ್ಯ ಕರ್ತವ್ಯವಾಗಿರುತ್ತದೆ. ಜಿಲ್ಲಾ ಅಧಿಕಾರಿಗಳ ಸಹಾಯಕ್ಕಾಗಿ ಒಬ್ಬರು ಕಚೇರಿ ಮೇಲ್ವಿಚಾರಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಮೂವರು ದ್ವಿತೀಯ ದರ್ಜೆ ಸಹಾಯಕರು, ಒಬ್ಬರು ಸಹಾಯಕ ಅಭಿವೃದ್ಧಿ ಅಧಿಕಾರಿಗಳು, ಒಬ್ಬ ಬೆರಳಚ್ಚುಗಾರರು, ಒಬ್ಬ ವಾಹನ ಚಾಲಕರು ಮತ್ತು ಒಬ್ಬ 'ಡಿ' ವೃಂದದ ನೌಕರರ ಹುದ್ದೆಗಳಿವೆ. ಮಡಿಕೇರಿಯಲ್ಲಿರುವ ಕೊಡಗು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಇವರ ಜಿಲ್ಲಾ ಮಟ್ಟದ ಮೇಲಧಿಕಾರಿಗಳಾಗಿದ್ದು ರಾಜ್ಯ ಮಟ್ಟದಲ್ಲಿ ಬೆಂಗಳೂರಿನಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ.

### ದೇವಸ್ಥಾನಗಳ ನಿಧಿ ವ್ಯವಸ್ಥಾಪನಾ ಸಮಿತಿ

ಕೊಡಗು ದೇವಸ್ಥಾನಗಳ ನಿಧಿ ವ್ಯವಸ್ಥಾಪನಾ ಸಮಿತಿಯು ಮಡಿಕೇರಿಯಲ್ಲಿ 1893ರಲ್ಲಿ ಪ್ರಾರಂಭವಾಯಿತು. ಜಿಲ್ಲಾಧಿಕಾರಿಗಳು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಲೋಕೋಪಯೋಗಿ ಇಲಾಖೆಯ ಕಾರ್ಯಪಾಲ ಅಭಿಯಂತರು ಅಧಿಕಾರಿ ಸದಸ್ಯರಾಗಿದ್ದು, ಸಮಿತಿಯಲ್ಲಿ ಒಟ್ಟು 11 ಮಂದಿ ಸದಸ್ಯರಿರುತ್ತಾರೆ. ಸಮಿತಿಯ ಉಪಾಧ್ಯಕ್ಷರಾಗಿ ಅಧಿಕಾರೇತರ ಸದಸ್ಯರನ್ನು ಸರ್ಕಾರವು ನಾಮಕರಣ ಮಾಡಿರುತ್ತದೆ. ಸಮಿತಿಯು ನೇಮಕ ಮಾಡಿದ ಓರ್ವರು ವ್ಯವಸ್ಥಾಪಕರಿರುತ್ತಾರೆ. ಓಂಕಾರೇಶ್ವರ ದೇವಾಲಯ ಮತ್ತು ರಾಜರ ಗದ್ದಿಗೆ (ಮಡಿಕೇರಿ) ಹಾಗೂ ಮಡಿಕೇರಿ ತಾಲೂಕಿನಲ್ಲಿರುವ ಭಗಂಡೇಶ್ವರ ದೇವಾಲಯ (ಭಾಗಮಂಡಲ) ಮತ್ತು ತಲಕಾವೇರಿ ದೇವಾಲಯ, ಪಾಡಿ ಶ್ರೀ ಸುಬ್ರಾಯ ದೇವಾಲಯ (ಕಕ್ಕಬ್ಬೆ), ಮಹಾಲಿಂಗೇಶ್ವರ ದೇವಾಲಯ (ಪಾಲೂರು) ಮತ್ತು ಹರಿಶ್ಚಂದ್ರ ದೇವಾಲಯ (ಪಾಲೂರು) ಹಾಗೂ ವೀರರಾಜಪೇಟೆ ತಾಲೂಕಿನ ಇರ್ಪು ಶ್ರೀರಾಮೇಶ್ವರ ದೇವಾಲಯ (ಕುರ್ಚಿ) ಈ ಏಳು ದೇವಾಲಯಗಳು ಈ ಸಮಿತಿಯ ವ್ಯಾಪ್ತಿಗೊಳಪಟ್ಟಿವೆ. ಸಮಿತಿಯ ಅಧೀನದಲ್ಲಿರುವ ದೇವಸ್ಥಾನಗಳ ಲೆಕ್ಕ ಪತ್ರವನ್ನಿಡುವುದು ಮತ್ತು ಸಭೆ, ಜಾತ್ರೆ ಉತ್ಸವಾದಿಗಳನ್ನು ಏರ್ಪಡಿಸುವುದು ಈ ಸಮಿತಿಯ ಪ್ರಮುಖ ಕಾರ್ಯವಾಗಿರುತ್ತದೆ. ಪ್ರತಿಯೊಂದು ದೇವಸ್ಥಾನದಲ್ಲೂ ತಲಾ ಒಬ್ಬ ಪಾರ್ಪತ್ತೆಗಾರರಿರುತ್ತಾರೆ. ಇವರು ದೇವಸ್ಥಾನಗಳ ಲೆಕ್ಕಪತ್ರವನ್ನು ಸಿದ್ಧಪಡಿಸಿ ಸಮಿತಿಗೆ ರವಾನಿಸುತ್ತಾರೆ ಮತ್ತು ದೇವಸ್ಥಾನದ ಉಸ್ತುವಾರಿಯನ್ನು ನಿರ್ವಹಿಸುತ್ತಾರೆ. ಈ ಸಮಿತಿಯ ಅಧೀನದಲ್ಲಿರುವ ದೇವಸ್ಥಾನಗಳಲ್ಲಿ ಒಟ್ಟು 65 ಮಂದಿ ನೌಕರರು ಕೆಲಸ ನಿರ್ವಹಿಸುತ್ತಾರೆ. ಈಗಿನ ಸಮಿತಿಯ ಸದಸ್ಯರುಗಳನ್ನು 21–1–1989ರಂದು ಸರ್ಕಾರವು ನಾಮಕರಣ ಮಾಡಿದ್ದು ಇವರ ಅವಧಿ ಮೂರು ವರ್ಷಗಳಾಗಿರುತ್ತವೆ.

### ಆಹಾರ ಮತ್ತು ನಾಗರಿಕ ಸರಬರಾಜು ನಿಗಮ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ (ನಿಯಮಿತ)ದ ಜಿಲ್ಲಾ ಮಟ್ಟದ ಕಚೇರಿಯು 1973ರಲ್ಲಿ ಮಡಿಕೇರಿಯಲ್ಲಿ ಆರಂಭವಾಯಿತು. ಆರಂಭದಲ್ಲಿ ಸಹಾಯಕ ನಿರ್ವಾಹಕರು ಕಚೇರಿಯ ಮುಖ್ಯಾಧಿಕಾರಿಯಾಗಿದ್ದು ಸಾರ್ವಜನಿಕರಿಗೆ ಅಗತ್ಯವಸ್ತುಗಳ ಪೂರೈಕೆ ಮತ್ತು ಆದೇಶದಂತೆ ಲೆವಿ ಮಾಡುವುದು ಇವರ ಮುಖ್ಯ ಜವಾಬ್ದಾರಿಯಾಗಿತ್ತು. 1985ರಲ್ಲಿ ಮುಖ್ಯಾಧಿಕಾರಿಗಳ ಹುದ್ದೆಯನ್ನು ಜಿಲ್ಲಾ ನಿರ್ವಾಹಕರಾಗಿ ಪರಿವರ್ತಿಸಿ 1986 ರಿಂದ ಸರ್ಕಾರದ ಆಹಾರ ನೀತಿಯಂತೆ ಲೆವಿ ಎತ್ತುವಳಿ ಕಾರ್ಯವನ್ನು ನಿಲ್ಲಿಸಿ ಸಾರ್ವಜನಿಕರಿಗೆ ಅಗತ್ಯ ವಸ್ತುಗಳನ್ನು ಪೂರೈಸುವ ಕಾರ್ಯವನ್ನು ಮಾತ್ರ ಮಾಡುತ್ತಿದೆ. ಈ ಕಚೇರಿಯಲ್ಲಿ ಮುಖ್ಯಾಧಿಕಾರಿಗಳ ನೆರವಿಗಾಗಿ ಎರಡು ಹಿರಿಯ ಸಹಾಯಕರು, ಎರಡು ಕಿರಿಯ ಸಹಾಯಕರು, ಮತ್ತಿತರ ಸಿಬ್ಬಂದಿ ವರ್ಗದವರ ಹುದ್ದೆಗಳಿವೆ. ಬೆಂಗಳೂರಿನಲ್ಲಿರುವ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಮಹಾಕಾರ್ಯ ನಿರ್ವಾಹಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

**ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ**

ಈ ನಿಗಮವು ಮಡಿಕೇರಿಯಲ್ಲಿ 1979–80ನೇ ಸಾಲಿನಲ್ಲಿ ಪ್ರಾರಂಭವಾಯಿತು. ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಬಡತನ ರೇಖೆಯಿಂದ ಮೇಲೆತ್ತಲು ರಾಷ್ಟ್ರೀಕೃತ ಬ್ಯಾಂಕುಗಳ ಸಹಯೋಗದೊಂದಿಗೆ ಸಾಲವನ್ನೊದಗಿಸಿ ಸ್ವಂತ ಉದ್ಯೋಗವನ್ನು ಉತ್ತೇಜಿಸುವುದು ಇದರ ಪ್ರಮುಖ ಕಾರ್ಯವಾಗಿದೆ. ಇದರ ಅಧಿಕಾರ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿದೆ. ಈ ಕಚೇರಿಯು ಪ್ರಾರಂಭವಾಗುವುದಕ್ಕೆ ಮುಂಚೆ ನಿಗಮದ ರಾಜ್ಯಮಟ್ಟದಲ್ಲಿನ ಕಚೇರಿಯೇ ಇದರ ಕಾರ್ಯವನ್ನು ನಿರ್ವಹಿಸುತ್ತಿತ್ತು. ಜಿಲ್ಲಾ ವ್ಯವಸ್ಥಾಪಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು ಇವರ ಸಹಾಯಕ್ಕಾಗಿ ಒಬ್ಬರು ಅಭಿವೃದ್ಧಿ ಸಹಾಯಕರು, ಇಬ್ಬರು ಕಿರಿಯ ಸಹಾಯಕರು ಮತ್ತು ಇಬ್ಬರು ಜವಾನರೂ ಇರುತ್ತಾರೆ.

**ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ**

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನಿರ್ವಹಣೆ ಮತ್ತು ಪಾಲನಾ ವಿಭಾಗದ ವಿಭಾಗ ಕಚೇರಿಯು ಮಡಿಕೇರಿಯಲ್ಲಿ 1978ರಲ್ಲಿ ಪ್ರಾರಂಭವಾಯಿತು. ಇದರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿರುತ್ತದೆ. ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಇವರು ಈ ಕಚೇರಿಯ ಮುಖ್ಯ ಅಧಿಕಾರಿಗಳಾಗಿರುತ್ತಾರೆ. ಇವರ ಕಚೇರಿಯಲ್ಲಿ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು (ಇಂಜಿನಿಯರ್) (ವಿದ್ಯುತ್), ಒಬ್ಬ ಸಹಾಯಕ ಅಭಿಯಂತರು (ವಿದ್ಯುತ್), ಒಬ್ಬ ಸಹಾಯಕ ಅಭಿಯಂತರು (ಸಿವಿಲ್), ಒಬ್ಬ ಲೆಕ್ಕಾಧಿಕಾರಿಗಳು, ಮೂವರು ಸಹಾಯಕ ಲೆಕ್ಕಾಧಿಕಾರಿಗಳೂ ಒಳಗೊಂಡಂತೆ 53 ವಿವಿಧ ಹುದ್ದೆಗಳಿವೆ. ಇವರ ಅಧೀನದಲ್ಲಿ ಮಡಿಕೇರಿ, ಗೋಣಿಕೊಪ್ಪಲು ಹಾಗೂ ಕುಶಾಲನಗರದಲ್ಲಿ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ (ಎಕ್ಸಿಕ್ಯೂಟಿವ್) ಅಭಿಯಂತರ ಕಚೇರಿಗಳಿದ್ದು, ಈ ಕಚೇರಿಗಳಲ್ಲಿ ಕ್ರಮವಾಗಿ 99, 173 ಮತ್ತು 148 ವಿವಿಧ ಹುದ್ದೆಗಳೂ ಇವೆ. ಮೈಸೂರಿನಲ್ಲಿರುವ ಮೈಸೂರು ವೃತ್ತ ಕಚೇರಿಯ ಅಧೀಕ್ಷಕ ಅಭಿಯಂತರು (ವಿದ್ಯುತ್) ಮಡಿಕೇರಿ ವಿಭಾಗ ಕಚೇರಿಯ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

**ಕರ್ನಾಟಕ ರಾಜ್ಯ ಉಗ್ರಾಣ ನಿಗಮ**

ಉಗ್ರಾಣ ನಿಗಮದ ಕೊಡಗು ಜಿಲ್ಲಾ ವ್ಯವಸ್ಥಾಪಕರ ಕಚೇರಿಯು ಕುಶಾಲನಗರದಲ್ಲಿ 1981 ರಲ್ಲಿ ಪ್ರಾರಂಭವಾಯಿತು. ರೈತರು, ವರ್ತಕರು, ರಸಗೊಬ್ಬರ ಕಂಪೆನಿಯವರು ಇವೇ ಮುಂತಾದವರು ತಮ್ಮ ಸರಕುಗಳನ್ನು ವೈಜ್ಞಾನಿಕವಾಗಿ ದಾಸ್ತಾನು ಮಾಡಿಕೊಳ್ಳಲು ವ್ಯವಸ್ಥೆ ಮಾಡುವುದು ಹಾಗೂ ದಾಸ್ತಾನು ಮಾಡಿದ ಸರಕುಗಳಿಗೆ ವಿಮೆ ಮಾಡಿಸುವುದು ಈ ಕಚೇರಿಯ ಪ್ರಮುಖ ಕಾರ್ಯವಾಗಿರುತ್ತದೆ. ವ್ಯವಸ್ಥಾಪಕರ ಕಾರ್ಯನಿರ್ವಹಣೆಯ ನೆರವಿಗಾಗಿ ಒಬ್ಬ ಹಿರಿಯ ಗುಮಾಸ್ತರೂ, ಒಬ್ಬ ಕಿರಿಯ ಗುಮಾಸ್ತರೂ ಮತ್ತು ಇತರ ಸಿಬ್ಬಂದಿ ಇರುತ್ತಾರೆ. ಇವರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿರುತ್ತದೆ. ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಪ್ರಾದೇಶಿಕ ವ್ಯವಸ್ಥಾಪಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

**ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ**

ಈ ಜಿಲ್ಲಾ ಕಚೇರಿಯು ಮಡಿಕೇರಿಯಲ್ಲಿ 1986 ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಹಿಂದೆ ಜಿಲ್ಲೆಯಲ್ಲಿನ ಖಾದಿ ಮತ್ತು ಗ್ರಾಮೋದ್ಯೋಗದ ವಿಸ್ತರಣೆ ಮತ್ತು ಅಭಿವೃದ್ಧಿಯ ಜವಾಬ್ದಾರಿಯು ಮೈಸೂರಿನಲ್ಲಿರುವ ಜಿಲ್ಲಾ ಕಚೇರಿಗೆ ಒಳಪಟ್ಟಿತ್ತು. ಈ ಕಚೇರಿಯ ಪ್ರಾರಂಭದಲ್ಲಿ ಮುಖ್ಯಾಧಿಕಾರಿಗಳ ಹುದ್ದೆಯ ಹೆಸರು ಜಿಲ್ಲಾಧಿಕಾರಿ, ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿ ಎಂದಿದ್ದು 1988 ರಲ್ಲಿ ಇದು ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಎಂದು ಬದಲಾವಣೆಯಾಯಿತು. ಮುಖ್ಯಾಧಿಕಾರಿಗಳ ಸಹಾಯಕ್ಕಾಗಿ ಒಬ್ಬ ಗುಮಾಸ್ತರು ಹಾಗೂ ಬೆರಳಚ್ಚುಗಾರರು, ಮೂವರು ತಾಂತ್ರಿಕ ಮೇಲ್ವಿಚಾರಕರು, ಒಬ್ಬ ಜೈವಿಕ ಅನಿಲತಂತ್ರಜ್ಞರು ಹಾಗೂ ಇತರ ಸಿಬ್ಬಂದಿ ಇದ್ದಾರೆ. ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿಯ ವಿಭಾಗೀಯ ಅಧಿಕಾರಿಗಳು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

**ಮೀನುಗಾರಿಕೆ ಅಭಿವೃದ್ಧಿ ನಿಗಮ**

ಮಂಗಳೂರಿನಲ್ಲಿರುವ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ ಸಹಸಂಸ್ಥೆಯಾಗಿ 1971ರಲ್ಲಿ ಮಡಿಕೇರಿ

ಯಲ್ಲಿ ಸಹಾಯಕ ಮಾರಾಟ ಅಧಿಕಾರಿಗಳ ಕಚೇರಿಯು ಪ್ರಾರಂಭವಾಯಿತು. 1978ರಲ್ಲಿ ಈ ಕಚೇರಿಯ ಹೆಸರು ಹಿರಿಯ ಮಾರಾಟ ಸಹಾಯಕ ಎಂದು ಬದಲಾವಣೆ ಯಾಯಿತು. ಕೊಡಗು ಜಿಲ್ಲೆಯಲ್ಲಿ ಘನೀಕರಿಸಿದ ಮೀನನ್ನು ಮಾರಾಟ ಮಾಡುವುದು ಇದರ ಪ್ರಧಾನ ಕಾರ್ಯವಾಗಿರುತ್ತದೆ. ಕಚೇರಿಯ ಕಾರ್ಯ ನಿರ್ವಹಣೆಯಲ್ಲಿ ಹಿರಿಯ ಮಾರಾಟ ಸಹಾಯಕರ ಸಹಾಯಕ್ಕಾಗಿ ಒಬ್ಬ ಕಿರಿಯ ಲೆಕ್ಕಪತ್ರ ಸಹಾಯಕರು, ಇಬ್ಬರು ಮಾರಾಟ ಸಹಾಯಕರು ಹಾಗೂ ಇತರ ಸಿಬ್ಬಂದಿ ವರ್ಗದವರಿದ್ದಾರೆ.

### ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಶಾಖಾ ಕಚೇರಿಯು ಮಡಿಕೇರಿಯಲ್ಲಿ 1985 ರಲ್ಲಿ ಪ್ರಾರಂಭ ವಾಯಿತು. ಶಾಖಾ ವ್ಯವಸ್ಥಾಪಕರು ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಅಲ್ಲದೆ ಒಬ್ಬ ತಾಂತ್ರಿಕ ಉಪ ವ್ಯವಸ್ಥಾಪಕರು ಮತ್ತು ಒಬ್ಬ ಹಣಕಾಸು ಹಾಗೂ ಲೆಕ್ಕಪತ್ರ ಉಪ ವ್ಯವಸ್ಥಾಪಕರು ಮತ್ತಿತರ ಸಿಬ್ಬಂದಿ ವರ್ಗದವರು ಇವರಿಗೆ ನೆರವಾಗುತ್ತಾರೆ. ಕೈಗಾರಿಕಾ ಘಟಕಗಳ ಸ್ಥಾಪನೆಗೆ ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡುವುದೇ ಅಲ್ಲದೆ ಅತೀ ಸಣ್ಣ ಕೈಗಾರಿಕೆ, ಸಾರಿಗೆ, ಹೋಟೆಲು ಉದ್ಯಮ, ನರ್ಸಿಂಗ್ ಹೋಂ, ಪ್ರವಾಸೋದ್ಯಮ ಚಟುವಟಿಕೆ ಇವೇ ಮುಂತಾದವು ಗಳಿಗೂ ಆರ್ಥಿಕ ನೆರವನ್ನು ನೀಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಮೈಸೂರಿನಲ್ಲಿರುವ ಮೈಸೂರು ವಲಯ ಕಚೇರಿಯ ಉಪಪ್ರಧಾನ ವ್ಯವಸ್ಥಾಪಕರು ಈ ಕಚೇರಿಯ ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಕೇಂದ್ರ ಸರ್ಕಾರದ ಇಲಾಖೆಗಳು

### ಅಂಚೆ ಇಲಾಖೆ

ಕೊಡಗು ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯು 1981 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಇದಕ್ಕೆ ಮುಂಚೆ ಇದರ ಕರ್ತವ್ಯವನ್ನು ಹಾಸನ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯು ನಿರ್ವಹಿಸುತ್ತಿತ್ತು. ಅಂಚೆ ಅಧೀಕ್ಷಕರ ಸಹಾಯಕ್ಕಾಗಿ ಒಬ್ಬರು ಸಹಾಯಕ ಅಂಚೆ ಅಧೀಕ್ಷಕರು, ಒಬ್ಬರು ತನಿಖಾಧಿಕಾರಿಗಳು, ಒಬ್ಬರು ಲೆಕ್ಕಪತ್ರಗಾರರು, ಆರು ಜನ ಕಚೇರಿ ಸಹಾಯಕರು, ಒಬ್ಬರು ಶೀಘ್ರಲಿಪಿ ಗಾರರು, ಹಾಗೂ ಇತರ ನೌಕರರು ಕಾರ್ಯನಿರ್ವಹಿಸುತ್ತಿರು ವರು. ಇವರ ಅಧಿಕಾರ ವ್ಯಾಪ್ತಿಯು ಜಿಲ್ಲೆಗೆ ಸೀಮಿತ ವಾದುದು. ಹೊಸ ಅಂಚೆ ಕಚೇರಿಗಳನ್ನು ಸ್ಥಾಪಿಸಲು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದು, ಅಂಚೆ ಕಚೇರಿ ಗಳ ಮೇಲ್ವಿಚಾರಣೆ ವಹಿಸುವುದು, ಅಂಚೆ ರವಾನೆಗಳಿಗ ಸಾರಿಗೆ ವ್ಯವಸ್ಥೆ ಮಾಡುವುದು, ಅಂಚೆ ಕಚೇರಿಗಳಿಗೆ ಕಟ್ಟಡ ಗಳನ್ನು ಒದಗಿಸುವುದು, ಸಾರ್ವಜನಿಕರಿಂದ ಬರುವ ದೂರು ಗಳನ್ನು ಸ್ವೀಕರಿಸುವುದು ಮತ್ತು ಪರಿಶೀಲಿಸುವುದು ಇವರ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಕಚೇರಿಯ ಅಧೀನದಲ್ಲಿ ಒಂದು ಕೇಂದ್ರ ಅಂಚೆ ಕಚೇರಿ, 25 ಉಪ ಅಂಚೆ ಕಚೇರಿ ಗಳು, ಮೂರು ಇಲಾಖೇತರ ಉಪ ಅಂಚೆ ಕಚೇರಿಗಳೂ ಕಾರ್ಯನಿರ್ವಹಿಸುತ್ತಿದೆ. ಒಟ್ಟಾರೆ 202 ಇಲಾಖಾ ಸಿಬ್ಬಂದಿ ಗಳೂ ಮತ್ತು 450 ಇಲಾಖೇತರ ಸಿಬ್ಬಂದಿಗಳೂ ವಿವಿಧ ಹುದ್ದೆಗಳಲ್ಲಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಬೆಂಗಳೂರಿನಲ್ಲಿರುವ ಕರ್ನಾಟಕ ವಲಯದ ಪೋಸ್ಟ್‌ಮಾಸ್ಟರ್ ಜನರಲ್ ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ. (ವಿವರಗಳಿಗೆ ಪುಟ 435 ನೋಡಿ).

### ಜಿಲ್ಲಾ ದೂರಸಂಪರ್ಕ ಇಂಜನಿಯರ್‌ರವರ ಕಚೇರಿ

ಮಡಿಕೇರಿಯಲ್ಲಿ ಜಿಲ್ಲಾ ದೂರಸಂಪರ್ಕ ಇಂಜನಿಯರ್ ರವರ ಕಚೇರಿಯು 1984ರಲ್ಲಿ ಪ್ರಾರಂಭವಾಯಿತು. ಈ ಕಚೇರಿಯು ಪ್ರಾರಂಭವಾಗುವುದಕ್ಕೆ ಮುಂಚೆ ಮಂಗಳೂರಿನ ಟೆಲಿಗ್ರಾಫ್ಸ್ ವಿಭಾಗೀಯ ಇಂಜನಿಯರ್ ಈ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆರಂಭದಲ್ಲಿ ಈ ಕಚೇರಿಯ ಮುಖ್ಯ ಹುದ್ದೆಯ ಹೆಸರು ವಿಭಾಗೀಯ ಇಂಜನಿಯರ್ (ಟೆಲಿಗ್ರಾಫ್ಸ್) ಎಂದಿದ್ದು 1985ರಲ್ಲಿ ದೂರಸಂಪರ್ಕ ಜಿಲ್ಲಾ ಇಂಜನಿಯರ್ ಎಂದೂ, 1989ರಲ್ಲಿ ವಿಭಾಗೀಯ ಅಧಿಕಾರಿಗಳು, ದೂರ ಸಂಪರ್ಕ ಎಂದೂ ಬದಲಾವಣೆಯಾಗಿದ್ದು ಮತ್ತೆ 1990ರಲ್ಲಿ ದೂರಸಂಪರ್ಕ ಜಿಲ್ಲಾ ಇಂಜನಿಯರ್ ಎಂದು ಬದಲಾವಣೆ ಯಾಯಿತು. ದೂರಸಂಪರ್ಕ ಜಾಲದ ಪ್ರತಿಷ್ಠಾಪನೆ, ಸಂರಕ್ಷಣೆ ಮತ್ತು ಆಡಳಿತವು ಇವರ ಮುಖ್ಯ ಉದ್ದೇಶವಾಗಿರುತ್ತದೆ. ಇವರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತ ವಾಗಿದೆ. ಈ ಕಚೇರಿಯಲ್ಲಿ ಒಬ್ಬರು ದೂರಸಂಪರ್ಕ ಜಿಲ್ಲಾ ಇಂಜನಿಯರ್, ಒಬ್ಬರು ಲೆಕ್ಕಾಧಿಕಾರಿಗಳು, ಇಬ್ಬರು ಸಹಾ ಯಕ ಲೆಕ್ಕಾಧಿಕಾರಿಗಳು, ಇಬ್ಬರು ಕಿರಿಯ ದೂರಸಂಪರ್ಕ ಅಧಿಕಾರಿಗಳು, ಒಬ್ಬರು ಹಿರಿಯ ಶಾಖಾ ಮೇಲ್ವಿಚಾರಕರು, ಇಬ್ಬರು ಶಾಖಾ ಮೇಲ್ವಿಚಾರಕರು, ಒಬ್ಬರು ಆಕೃತಿ ರಚನಾ ಕಾರರೂ, ಮತ್ತು ಮೂವತ್ತುಮೂರು ದೂರಸಂಪರ್ಕ ಕಚೇರಿ ಸಹಾಯಕರೂ ಒಳಗೊಂಡಂತೆ 53 ವಿವಿಧ ಹುದ್ದೆಗಳಿವೆ. ಈ ಕಚೇರಿಯ ಅಧೀನತೆಯಲ್ಲಿ ಮಡಿಕೇರಿ ಹಾಗೂ ವೀರರಾಜ ಪೇಟೆಗಳಲ್ಲಿ ಉಪವಿಭಾಗೀಯ ಅಧಿಕಾರಿಗಳ ಕಚೇರಿಯು ಕಾರ್ಯ ನಿರ್ವಹಿಸುತ್ತಿದೆ. ಮಡಿಕೇರಿಯಲ್ಲಿನ ಉಪ ವಿಭಾಗೀಯ

ಅಧಿಕಾರಿಗಳ ಕಚೇರಿಯಲ್ಲಿ, ಕಚೇರಿಯ ಮುಖ್ಯಸ್ಥರೂ ಸೇರಿದಂತೆ ಒಟ್ಟು 211 ಹುದ್ದೆಗಳಿದ್ದು ಇವರ ವ್ಯಾಪ್ತಿಯು ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕುಗಳನ್ನೊಳಗೊಂಡಿದೆ ಮತ್ತು ವೀರರಾಜಪೇಟೆಯಲ್ಲಿನ ಉಪವಿಭಾಗೀಯ ಅಧಿಕಾರಿಗಳ ಕಚೇರಿಯಲ್ಲಿ, ಕಚೇರಿಯ ಮುಖ್ಯಸ್ಥರೂ ಸೇರಿದಂತೆ ಒಟ್ಟು 182 ಹುದ್ದೆಗಳಿದ್ದು ಇವರ ವ್ಯಾಪ್ತಿಯು ವೀರರಾಜಪೇಟೆ ತಾಲೂಕಿಗೆ ಸೀಮಿತವಾಗಿದೆ. ಮಂಗಳೂರಿನಲ್ಲಿರುವ ಮಂಗಳೂರು ಕ್ಷೇತ್ರದ ದೂರಸಂಪರ್ಕ ನಿರ್ದೇಶಕರು ಈ ಕಚೇರಿಯ ಮೇಲಧಿಕಾರಿಗಳಾಗಿರುತ್ತಾರೆ.

### ತಂತಿ ಕಚೇರಿ

ವಿಭಾಗೀಯ ತಂತಿ ಕಚೇರಿಯು ಮಡಿಕೇರಿಯಲ್ಲಿ 1973 ರಲ್ಲಿ ಪ್ರಾರಂಭವಾಯಿತು. ಆರಂಭದಲ್ಲಿ ಟೆಲಿಗ್ರಾಫಿಸ್ಟ್ ಇನ್‌ಚಾರ್ಜ್ ಇವರ ಮುಖ್ಯಸ್ಥರಾಗಿದ್ದರು. 1976ರಲ್ಲಿ ಸಹಾಯಕ ಅಧೀಕ್ಷಕರು ಈ ಕಚೇರಿಯ ಮುಖ್ಯಸ್ಥರಾದರು. ವಿವಿಧ ಸ್ಥಳಗಳಿಂದ ಜಿಲ್ಲೆಗೆ ಬಂದ ತಂತಿಗಳನ್ನು ಸ್ವೀಕರಿಸುವುದು, ಮತ್ತು ಜಿಲ್ಲೆಯ ವಿವಿಧ ಸ್ಥಳಗಳಿಂದ ಬೇರೆ ಸ್ಥಳಗಳಿಗೆ ಹೋಗಬೇಕಾದ ತಂತಿಗಳನ್ನು ರವಾನಿಸುವುದು ಈ ಕಚೇರಿಯ ಮುಖ್ಯ ಕೆಲಸವಾಗಿರುತ್ತದೆ. ಮಂಗಳೂರಿನಲ್ಲಿರುವ ಮಂಗಳೂರು ವಿಭಾಗದ ತಂತಿಚಾಲನೆಯ ಅಧೀಕ್ಷಕರು ಈ ಕಚೇರಿಯ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

### ನೆಹರು ಯುವಕೇಂದ್ರ

ಭಾರತ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವ ನೆಹರು ಯುವಕೇಂದ್ರವು ಮಡಿಕೇರಿಯಲ್ಲಿ 1977ರಲ್ಲಿ ಪ್ರಾರಂಭವಾಯಿತು. ಯುವಜನರಿಗೆ ಕ್ರೀಡಾ ಚಟುವಟಿಕೆಗಳಲ್ಲಿ ಉತ್ತೇಜನ ನೀಡುವುದು, ರಾಷ್ಟ್ರೀಯ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಯುವ ಜನರನ್ನು ಪ್ರೇರೇಪಿಸುವುದು, ಗ್ರಾಮೀಣ ವಿದ್ಯಾರ್ಥಿಯೇತರ ಯುವ ಜನರನ್ನು ಸಂಘಟಿಸಿ ಅವರ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿ ಪ್ರೇರೇಪಿಸುವುದು, ಸಾಂಸ್ಕೃತಿಕ ಮತ್ತು ಜಾನಪದ ಕಲೆಯ ಅಭಿವೃದ್ಧಿಗಾಗಿ ಶ್ರಮಿಸುವುದು ಇವೇ ಮುಂತಾದವು ಇದರ ಪ್ರಮುಖ ಕಾರ್ಯಗಳಾಗಿರುತ್ತವೆ. ಯುವಜನ ಸಮನ್ವಯಾಧಿಕಾರಿಗಳು ಇದರ ಮುಖ್ಯಾಧಿಕಾರಿಯಾಗಿದ್ದು ಇವರ ಅಧಿಕಾರ ವ್ಯಾಪ್ತಿಯು ಕೊಡಗು ಜಿಲ್ಲೆಗೆ ಸೀಮಿತವಾಗಿರುತ್ತದೆ. ಇವರ ಕಚೇರಿಯಲ್ಲಿ ಒಬ್ಬ ಲೆಕ್ಕಿಗರ ಹಾಗೂ ಒಬ್ಬ 'ಡಿ' ವೃಂದದ ನೌಕರರ ಹುದ್ದೆಗಳಿವೆ. ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯಲ್ಲಿರುವ ಪ್ರಾದೇಶಿಕ ಯುವಜನ ಸಮನ್ವಯಾಧಿಕಾರಿಗಳು ಇವರ ಮೇಲಧಿಕಾರಿಗಳಾಗಿರುತ್ತಾರೆ.

### ಕಾಫಿ ಮಂಡಳಿ

ಮಡಿಕೇರಿಯಲ್ಲಿ ಕಾಫಿ ಮಂಡಳಿಯ ವಿಸ್ತರಣಾ ವಿಭಾಗದ ಉಪ ನಿರ್ದೇಶಕರ ಕಚೇರಿಯು ಕಾರ್ಯ ನಿರ್ವಹಿಸುತ್ತಿದೆ. ಕಾಫಿ ಬೆಳೆಗಾರರಿಗೆ ಬೇಕಾದ ತಾಂತ್ರಿಕ ಸಹಾಯವನ್ನು ನೀಡುವುದು ಇವರ ಮುಖ್ಯ ಉದ್ದೇಶವಾಗಿದೆ. ಕೊಡಗು ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ ಈ ಕಚೇರಿಯ ಅಧಿಕಾರ ವ್ಯಾಪ್ತಿಯಲ್ಲಿದೆ. ಈ ಕಚೇರಿಯ ಅಧೀನದಲ್ಲಿ ಮಡಿಕೇರಿ, ಸೋಮವಾರಪೇಟೆ ಮತ್ತು ಗೋಣಿಕೊಪ್ಪಲುಗಳಲ್ಲಿ ಸೀನಿಯರ್ ಸಂಪರ್ಕ ಅಧಿಕಾರಿಗಳು ಇರುವ ವಿಭಾಗೀಯ ಕಚೇರಿಗಳೂ, ನಾಪೊಕ್ಲು, ಸುಂಟಿಕೊಪ್ಪ, ಶನಿವಾರಸಂತೆ, ವೀರರಾಜಪೇಟೆ, ಸಿದ್ದಾಪುರ ಮತ್ತು ಶ್ರೀಮಂಗಲಗಳಲ್ಲಿ ಜೂನಿಯರ್ ಸಂಪರ್ಕ ಅಧಿಕಾರಿಗಳು-ಇರುವ ವಲಯ ಕಚೇರಿಗಳೂ ಮತ್ತು ಮೂರ್ನಾಡು, ಸಿದ್ದಾಪುರ, ಬಾಳೆಲೆ ಮತ್ತು ತಿತಿಮತಿಯಲ್ಲಿ ಸಹಾಯಕ ವಿಸ್ತರಣಾಧಿಕಾರಿಗಳಿರುವ ವಿಸ್ತರಣಾ ಕೇಂದ್ರಗಳೂ ಕಾರ್ಯ ನಿರ್ವಹಿಸುತ್ತಿವೆ. ಒಟ್ಟಾರೆ ಈ ಕಚೇರಿಯ ವ್ಯಾಪ್ತಿಯಲ್ಲಿ ಉಪ ನಿರ್ದೇಶಕರೂ ಸೇರಿದಂತೆ 72 ಹುದ್ದೆಗಳಿವೆ. ಬೆಂಗಳೂರಿನಲ್ಲಿರುವ ಕಾಫಿ ಮಂಡಳಿಯ ಜಂಟಿ ನಿರ್ದೇಶಕರು (ವಿಸ್ತರಣಾ ವಿಭಾಗ) ಈ ಕಚೇರಿಯ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

ಸೋಮವಾರಪೇಟೆ ತಾಲೂಕಿನ ಚೆಟ್ಟಳ್ಳಿಯಲ್ಲಿ ಕಾಫಿ ಸಂಶೋಧನಾ ಉಪ ಕೇಂದ್ರವು 1947 ರಿಂದ ಕಾರ್ಯ ನಿರ್ವಹಿಸುತ್ತಿದ್ದು ಕಾಫಿ ಗಿಡದ ಪೋಷಣೆ, ತಳಿಗಳ ಉತ್ಪಾದನೆ ಮತ್ತು ರಕ್ಷಣೆಯು ಇದರ ಮುಖ್ಯ ಉದ್ದೇಶವಾಗಿದೆ. ಜಿಲ್ಲೆಯಲ್ಲಿ ಬೆಳೆಯಲು ಸೂಕ್ತವಾದ ಕಾಫಿ ತಳಿಗಳನ್ನು ಈ ಕೇಂದ್ರವು ಅಭಿವೃದ್ಧಿ ಪಡಿಸುತ್ತದೆ.

ಮಡಿಕೇರಿಯಲ್ಲಿ ಕಾಫಿ ಮಂಡಳಿಯ ಉಪ ಮುಖ್ಯ ಮಾರುಕಟ್ಟೆ ಅಧಿಕಾರಿಗಳ ಕಚೇರಿಯು ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿನ ಕಾಫಿ ಶೇಖರಣೆ, ಸಂಸ್ಕರಣೆ ಮತ್ತು ಮಾರಾಟವು ಇದರ ಮುಖ್ಯ ಜವಾಬ್ದಾರಿಯಾಗಿರುತ್ತದೆ. (ಪು. 263 ನೋಡಿ)

### ಸಾಂಬಾರ ಮಂಡಳಿ

ಕೊಡಗು ಜಿಲ್ಲೆಯ ಏಲಕ್ಕಿ ಮಂಡಳಿಯ ಕ್ಷೇತ್ರಾಧಿಕಾರಿ ಕಚೇರಿಯು 1969ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. 1970ರಲ್ಲಿ ಇದನ್ನು ಸಹಾಯಕ ನಿರ್ದೇಶಕರ ಕಚೇರಿಯಾಗಿ ಪರಿವರ್ತಿಸಿದ್ದು, 1987ರಲ್ಲಿ ಇದನ್ನು ಸಾಂಬಾರ ಮಂಡಳಿಯ ಸಹಾಯಕ ನಿರ್ದೇಶಕರ (ಅಭಿವೃದ್ಧಿ)

ವಲಯ ಕಚೇರಿಯನ್ನಾಗಿ ಬದಲಾವಣೆ ಮಾಡಲಾಯಿತು. ಆರಂಭದಲ್ಲಿ ಇವರ ಅಧಿಕಾರ ವ್ಯಾಪ್ತಿಯು ಕರ್ನಾಟಕ ರಾಜ್ಯದಲ್ಲಿ ಏಲಕ್ಕಿ ಬೆಳೆಯು ಕ್ಷೇತ್ರಗಳಿಗೆ ಸೀಮಿತವಾಗಿದ್ದು 1981 ರಿಂದ ಇವರ ಅಧಿಕಾರ ವ್ಯಾಪ್ತಿಯು ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಸಕಲೇಶಪುರ ತಾಲೂಕಿನ ಎಸ್ಲೂರು ಘಟಕಕ್ಕೆ ಸೀಮಿತವಾಗಿದೆ. ಇವರ ಕಚೇರಿಯಲ್ಲಿ ಮೂವರು ಹಿರಿಯ ಗುಮಾಸ್ತರುಗಳು, ಒಬ್ಬ ಫೀಲ್ಡ್‌ಮ್ಯಾನ್ ಮತ್ತು ಒಬ್ಬ ಹಿರಿಯ ವಾಹನ ಚಾಲಕ ಕಾರ್ಯ ನಿರ್ವಹಿಸುತ್ತಿರುವರು. ಇವರ ಅಧೀನದಲ್ಲಿ ಮಡಿಕೇರಿ, ಭಾಗಮಂಡಲ, ವೀರರಾಜಪೇಟೆ, ಸೋಮವಾರ ಪೇಟೆ, ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಎಸ್ಲೂರಿನಲ್ಲಿರುವ ಸಾಂಬಾರ ಮಂಡಳಿಯ ಕ್ಷೇತ್ರಾಧಿಕಾರಿಗಳೂ ಮತ್ತು ಬಿಳಿಗೇರಿ, ಐಗೂರು ಮತ್ತು ಎಸ್ಲೂರಿನಲ್ಲಿರುವ ಅಸಿಸ್ಟೆಂಟ್ ಫಾರಂ ಆಫೀಸರ್ ಮತ್ತು ಇವರುಗಳ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿರುವರು. ಹಾಸನ ಜಿಲ್ಲೆಯ ಸಕಲೇಶಪುರದಲ್ಲಿರುವ ಸಾಂಬಾರ ಮಂಡಳಿಯ ಪ್ರಾದೇಶಿಕ ಕಚೇರಿಯ ಉಪ ನಿರ್ದೇಶಕರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.